# ಮೂಡುಬಿದಿರೆಯ ವೈಶಿಷ್ಟ್ಯ

## ಕನ್ನಡ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರ ಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರತಿಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಮಹತ್ವದ ಲೇಖಕರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ಸಾಹಿತ್ಯ ಮತ್ತು ಸಾಹಿತ್ಯೇತರವಾದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಜನರಿಗೆ ತಿಳುವಳಿಕೆ ನೀಡಲು ಪ್ರಸಾರೋಪನ್ಯಾಸಗಳನ್ನು ಮಾಡಿಸುವ ಯೋಜನೆಯನ್ನು ರೂಪಿಸಿಕೊಂಡು ಅದರಂತೆ ಕಾರ್ಯ ನಿರ್ವಹಿಸುತ್ತಿದೆ. ಅತ್ಯಂತ ಸರಳವಾಗಿ ಈ ವಿಷಯಗಳನ್ನು ಕುರಿತು ಪರಿಚಯ ಮಾಡಿಕೊಡುವ ಈ ಉಪನ್ಯಾಸಗಳನ್ನು ಪುಸ್ತಕಗಳ ಮೂಲಕವಾಗಿ ಪ್ರಕಟಿಸುತ್ತಿದೆ. ಈ ಉಪನ್ಯಾಸ ಮಾಲೆ ಮತ್ತು ಅದರ ಉತ್ಪನ್ನಗಳಾದ ಈ ಚಿಕ್ಕ ಹೊತ್ತಿಗೆಗಳು ತುಂಬ ಜನಪ್ರಿಯವಾಗಿವೆ. ಈ ಮಾಲೆಯಲ್ಲಿ ಪ್ರಸ್ತುತ ಪುಸ್ತಕ ಪ್ರಕಟವಾಗುತ್ತಿದೆ.

'ಮೂಡುಬಿದಿರೆಯ ವೈಶಿಷ್ಟ್ಯ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಪ್ರೊ. ಎಸ್.ಪಿ. ಅಜಿತ ಪ್ರಸಾದ್ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಗಳು

# ಮೂಡುಬಿದಿರೆಯ ವೈಶಿಷ್ಟ್ಯ (೧)

## ಹಿನ್ನೆಲೆ

ಇಂದು ಮೂಡುಬಿದಿರೆ ಎಂದು ಕರೆಸಿಕೊಳ್ಳುತ್ತಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಮಹತ್ವದ, ಅಂತೆಯೇ ಕನ್ನಡ ಸಾಹಿತ್ಯಕ್ಕೆ, ರತ್ನಾಕರನಂತಹಾ ಕವಿಯನ್ನು ಕೊಡುಗೆಯಾಗಿ ಕೊಟ್ಟಿರುವ ಈ ಪುಟ್ಟ ಊರು ಇತಿಹಾಸ ಕಾಲದಲ್ಲಿ 'ಬಿದಿರೆ' ಎಂಬುದಾಗಿ ಗುರುತಿಸಲ್ಪಡುತ್ತಿತ್ತು. 'ತುಳು ದೇಶಕ್ಕೆ ವಿಶಿಷ್ಟಮಪ್ಪ ನಗರ', 'ಜಿನಧರ್ಮದಾಗರ', 'ಧರೆಯೊಳಗಂ ಪ್ರಸಿದ್ಧಿ ಪಡೆದೊಪ್ಪುವ' ನಗರ ಎಂದೆಲ್ಲ ಹೊಗಳಿಸಿಕೊಂಡಿರುವ 'ಬಿದಿರೆ' ವೇಂಕಟಪುರ, ಮೂಡುಬಿದಿರೆ, ವಂಶಪುರ ಎಂಬ ಹೆಸರುಗಳಿಂದಲೂ ಗುರುತಿಸಲ್ಪಡುತ್ತಿತ್ತು. ಬಿದಿರು ಹೆಚ್ಚಾಗಿ ಬೆಳೆಯುವ ಪ್ರದೇಶ ಎಂಬ ಅರ್ಥವನ್ನು ಸೂಚಿಸುವ ಈ ಎಲ್ಲ ಹೆಸರುಗಳೂ ಸಸ್ಯ ಸೂಚಿಗಳೇ ಆಗಿವೆ. ತುಳಿವಿನಲ್ಲಿ 'ಬೆದ್‌ದ್ರ' 'ಬೆದ್ರ' ಎಂದೂ ಗುರುತಿಸಲ್ಪಡುವ ಪದವೂ ಈ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಬೆಳೆಯಲ್ಪಡುತ್ತಿದ್ದ ಬಿದಿರಿನ ಸಂಕೇತವೇ ಆಗಿದೆ. 'ಮೂಡು' ದಿಕ್ಸೂಚಿ ಆದರೆ, 'ಬಿದಿರೆ' ಸಸ್ಯಸೂಚಿ ಆಗಿದೆ. ಇದಕ್ಕೆ ಸಂವಾದಿಯಾಗಿ 'ಪಡುಬಿದ್ರಿ' ಎಂಬ ಹೆಸರೂ ಪರಿಶೀಲಿಸಬಹುದು.

## ಇತಿಹಾಸ ಪೂರ್ವ ಮೂಡುಬಿದಿರೆ

ಮಾನವನ ಮೊದಲ ಹೆಜ್ಜೆಗಳು ಮೂಡಿಬಿದಿರೆಯ ಪ್ರದೇಶಗಳಲ್ಲಿ ಮೊದಲು ಎಂದು ಇಡಲ್ಪಟ್ಟಿತ್ತು ಎಂಬುದನ್ನು ದೊರಕಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ ದೊರಕುವ ಉತ್ತರ ಕುತೂಹಲಕಾರಿ. ಪ್ರಾಚೀನ ಶಿಲಾಯುಗದ ಮತ್ತು ಲೋಹಯುಗದ ಅವಶೇಷಗಳನ್ನು ಮೂಡುಬಿದಿರೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಗುರ್ತಿಸುವ ಸಾಧ್ಯತೆಗಳಿವೆ. ಮೂಡುಬಿದಿರೆ ಸಮೀಪದ ಕೋಡಂಗಲ್ಲು ಪ್ರಾಚೀನ ಮಾನವನ ಆವಾಸ ಸ್ಥಾನಗಳಲ್ಲಿ ಒಂದಾಗಿತ್ತು. ಇಲ್ಲಿಯ ಹೆಬ್ಬಂಡೆಗಳ ನಡುವೆ ಇರುವ ವಿಶಾಲವಾದ ಗುಹೆಗಳಲ್ಲಿ ಪ್ರಾಚೀನ ಮಾನವರು ಬದುಕಿದ್ದರೆಂದು ಹೇಳಬಹುದು. ಕೋಡಂಗಲ್ಲಿನ ಸುತ್ತಮುತ್ತ ನನ್ನ ಮಿತ್ರರಾದ ಡಾ|| ಪುಂಡಿಕ್ಯಾ ಗಣಪಯ್ಯ ಭಟ್ ಅವರೊಂದಿಗೆ ಸುತ್ತಾಡುತ್ತಿದ್ದಾಗ ಪ್ರಾಚೀನ ಮಾನವನ ಬಳಕೆಯ ಕೆಲವು ಶಿಲಾ ಆಯುಧಗಳನ್ನು ಗುರ್ತಿಸಿದ್ದೆವು. ಈ ಗುಹೆಗಳ ಸಮೀಪ ಇಂದಿಗೂ ಕಾಣಸಿಗುವ ಕೆಲವು ಶಿಲಾಸಮಾಧಿಗಳು ಬೃಹತ್ ಶಿಲಾಯುಗಕ್ಕೆ ಸೇರಿದವು. ಅಚ್ಚುಕಟ್ಟಾದ ಹೊಂಡಗಳನ್ನು ತೋಡಿ ಶವಗಳನ್ನು ಸಂಸ್ಕಾರ ಮಾಡಿ ಅವುಗಳ ಮೇಲೆ ಬೃಹತ್ ಶಿಲಾಫಲಕಗಳನ್ನು ಭೂಮಿಯ ಮೇಲ್ಮೈಗೆ ಸಮಾನಾಂತರವಾಗಿ ಹೊದಿಸಿ ಅಥವಾ ನೆಟ್ಟಗೆ ನಿಲ್ಲಿಸಿ ರಚಿಸಿರುವ ಶಿಲಾಸಮಾಧಿಗಳನ್ನು ಇಲ್ಲಿ ಕಾಣಬಹುದಾಗಿದೆ. ಇದರಂತೆ ಮೂಡುಬಿದಿರೆಯ ಮತ್ತೊಂದು ದಿಕ್ಕಿನಲ್ಲಿರುವ ಕಾಂತಾವರದ

ಬೆಟ್ಟದ ಸಾಲುಗಳ ಮಧ್ಯದಲ್ಲಿಯೂ, ಬೋರ್‌ಕಟ್ಟೆ ಹಾಗೂ ಸುತ್ತಲಿನ ಪರಿಸರದಲ್ಲಿ ಶಿಲಾಯುಗದ ಜನರ ವಾಸ್ತವ್ಯಗಳಿದ್ದವೆಂದು ಹೇಳಬಹುದು. ಈ ಎಲ್ಲ ಆಧಾರಗಳ ಮೇಲೆ ಈ ಪ್ರದೇಶದಲ್ಲಿ ಕ್ರಿ.ಪೂ. ಸುಮಾರು ೮೦೦ರ ಹೊತ್ತಿಗೆ ಅಂದರೆ ಸು. ೨೭೫೦ ವರ್ಷಗಳಷ್ಟು ಪೂರ್ವದಲ್ಲಿಯೇ ಜನವಸತಿ ಇತ್ತು ಎಂಬ ಅಂಶವನ್ನು ಸ್ಪಷ್ಟ ಪಡಿಸುತ್ತದೆ.

**ಇತಿಹಾಸದ ಮೊದಲ ಹೆಜ್ಜೆಗಳು**

ಇತಿಹಾಸದ ಪ್ರಾರಂಭಿಕ ಕಾಲದಲ್ಲಿ ಕರ್ನಾಟಕದ ಬಹುಭಾಗ ಮೌರ್ಯರು ಹಾಗೂ ಶಾತವಾಹನರ ಆಳ್ವಿಕೆಗೆ ಒಳಗಾಗಿತ್ತು. ಬಹುಷಃ ಮೂಡುಬಿದಿರೆಯ ಇತಿಹಾಸದ ಮೊದಲ ಹೆಜ್ಜೆಗಳೂ ಈ ರೀತಿಯ ಪ್ರಾರಂಭ ಆಗಿರಬಹುದೆಂದು ಊಹಿಸಲು ಅವಕಾಶ ಇದೆ. ಕದಂಬ ಸಾಮ್ರಾಜ್ಯ ಸ್ಥಾಪನೆ ಆದ ನಂತರ ಕರಾವಳಿ ಕರ್ನಾಟಕದ ಮೇಲೆ ಮಯೂರ ಶರ್ಮನ ಪ್ರಭಾವ ದಟ್ಟವಾಗಿತ್ತು. ಕದಂಬ ಸಾಮ್ರಾಜ್ಯ ಪತನ ಹೊಂದಿದ ತರುವಾಯ ಚಾಲುಕ್ಯರ ಆಡಳಿತಕ್ಕೆ, ಮೂಡುಬಿದಿರೆ ಸೇರಿ ಹೋಯಿತು. ಕರಾವಳಿ ಪ್ರದೇಶವನ್ನು ಇಮ್ಮಡಿ ಪುಲಿಕೇಶಿ ತನ್ನ ಪರಾಕ್ರಮದ ಮೂಲಕ ಗೆದ್ದುಕೊಂಡ ವಿವರವನ್ನು ರವಿಕೀರ್ತಿಯ ಐಹೊಳೆ ಪ್ರಶಸ್ತಿ ತಿಳಿಸುತ್ತದೆ. ಕ್ರಿ.ಶ. ೩ನೇ ಶತಮಾನದಿಂದ, (ಅತ್ಯಂತ ಖಚಿತವಾಗಿ ಕ್ರಿ. ಶ. ೭ನೇ ಶತಮಾನದಿಂದ) ೧೪ನೇ ಶತಮಾನದವರೆಗೂ ತುಳುನಾಡನ್ನು ಆಳಿದ ಅಳುಪ ವಂಶದ ಅರಸರ ಆಳ್ವಿಕೆಗೆ ಮೂಡುಬಿದಿರೆಯೂ ಒಳಪಟ್ಟಿತ್ತು. ಈ ವಿಚಾರವು ಅಳಪರಸರಿಗೆ ಸಂಬಂಧಿಸಿದ ಆರು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೨೦೪-೧೩೯೬ರ ಅವಧಿಯವರೆಗಿನ ಈ ಆರೂ ಅಳುಪರ ಶಾಸನಗಳು ಅನುಕ್ರಮವಾಗಿ ಅಳುಪದೊರೆಗಳಾದ ಒಂದನೆಯ ಕುಲಶೇಖರ, ಬಮ್ಮದೇವಾಳ್ವೇಂದ್ರ, ಮೂರನೆಯ ಕುಲಶೇಖರ ಮತ್ತು ಎರಡನೆ ವೀರಪಾಂಡ್ಯನ ಆಳ್ವಿಕೆಗೆ ಸಂಬಂಧಿಸಿದವು. ಉದ್ಯಾವರ, ಮಂಗಳೂರು ಹಾಗೂ ಬಾರಕೂರುಗಳನ್ನು ಅನುಕ್ರಮವಾಗಿ ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡು ತುಳುನಾಡನ್ನು ಆಳುತ್ತಿದ್ದ ಅಳುಪರು ತಮ್ಮ ಆಳ್ವಿಕೆಯ ಕೊನೆಯ ಕಾಲದಲ್ಲಿ ಮೂಡುಬಿದಿರೆಯನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ನಡೆಸಿದ್ದರು ಎಂಬ ಕುತೂಹಲಕರ ಮಾಹಿತಿ ಶಾಸನಗಳಿಂದ ಲಭ್ಯವಾಗುತ್ತದೆ. ಅಳುಪ ವಂಶದ ಕೊನೆಯ ಅರಸರಾದ ಮೂರನೆಯ ಕುಲಶೇಖರ ಮತ್ತು ಎರಡನೆಯ ವೀರಪಾಂಡ್ಯರ ಕಾಲದಲ್ಲಿ ಮೂಡುಬಿದಿರೆಯು ಅಳುಪರ ರಾಜಧಾನಿ ಆಗಿತ್ತು. ಮೂಡುಬಿದಿರೆಯ ಅಮ್ಮನವರ ಬಸದಿಯ ಕ್ರಿ.ಶ. ೧೩೮೪ರ ಶಾಸನ ಒಂದರಲ್ಲಿ ಮೂರನೆಯ ಕುಲಶೇಖರನು "ಬಿದಿರೆಯ ಬಸದಿಯೊಳು ರತ್ನಸಿಂಹಾಸನಾ ರೂಢನಾಗಿ" ರಾಜ್ಯಭಾರ ಮಾಡುತ್ತಿದ್ದ ಎಂದು ಉಲ್ಲೇಖಿಸಲಾಗಿದೆ. ವ್ಯವಸ್ಥಿತ ಆಡಳಿತಕ್ಕೆ ಹೆಸರಾಗಿದ್ದ ಅಳುಪರು ಮೂಡುಬಿದಿರೆಯ ಗೌರಿ ದೇವಾಲಯಕ್ಕೂ, ಪರಿಸರದ ಕೆಲವು ದೇವಾಲಯಗಳಿಗೂ ದಾನದತ್ತಿಗಳನ್ನು ಕೊಟ್ಟಿದ್ದರು. ಅವರ ತಾಮ್ರ ಹಾಗೂ ಶಿಲಾ ಶಾಸನಗಳು ಮೂಡುಬಿದಿರೆಯ ನೆರೆ-ಹೊರೆಯ ಬೆಳ್ಮಣ್, ಶಿವಳ್ಳಿ, ಕಾಂತಾವರ, ಬೋಳ, ಕಡಂದರೆ ಮುಂತಾದ ಊರುಗಳ ಹೆಸರುಗಳನ್ನು ಪ್ರಸ್ತಾಪಿಸುತ್ತದೆ.

ಅಳುಪರ ಆಳ್ವಿಕೆಯ ನಂತರ ಕೆಲವು ಕಾಲ ಮೂಡುಬಿದಿರೆಯು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೩೪೨ಕ್ಕೆ ಸೇರುವ ಮೂಡುಬಿದಿರೆ ಶಾಸನವೊಂದು ಹೊಯ್ಸಳ ೨ನೇ ಬಲ್ಲಾಳನು ಕಾನೂನು ಮತ್ತು ಶಿಸ್ತನ್ನು ಸ್ಥಾಪಿಸಿ ಪಾಲಿಸುವಲ್ಲಿ ವಹಿಸಿದ ಕಾಳಜಿಯನ್ನು ತಿಳಿಸುತ್ತದೆ. ಹೊಯ್ಸಳರ ನಂತರ ವಿಜಯ ನಗರದ ಉತ್ಕರ್ಷ ಕಾಲದಲ್ಲಿ, ಆ ಸಾಮ್ರಾಜ್ಯದ ಭಾಗವಾಗಿ ಮೂಡುಬಿದಿರೆ ಮುಂದುವರೆಯಿತು. ಆಡಳಿತಾತ್ಮಕ ದೃಷ್ಟಿಯಿಂದ ವಿಜಯನಗರ ಅರಸರು ತುಳುನಾಡನ್ನು ಮಂಗಳೂರು ಮತ್ತು ಬಾರಕೂರು ಎಂಬುದಾಗಿ ವಿಂಗಡಿಸಿದ್ದರು. ಮೂಡುಬಿದಿರೆಯು ಈ ಆಡಳಿತಾತ್ಮಕ ವಿಭಾಗದ ಸಿಹಿಫಲವನ್ನು ಅನುಭವಿಸಿತು. ಮಂಗಳೂರು ಪ್ರಾಂತ್ಯದ ಅತ್ಯಂತ ಪ್ರಭಾವಯುತವಾದ ಹಾಗೂ ವಿಶಿಷ್ಟವಾದ ನಗರವಾಗಿ ಮೂಡುಬಿದಿರೆ ಈ ಅವಧಿಯಲ್ಲಿ ಬೆಳವಣಿಗೆ ಹೊಂದಿತು. ಮಂಗಳೂರನ್ನು ಆಳುತ್ತಿದ್ದ ವಿಜಯನಗರದ ರಾಜಪ್ರತಿನಿಧಿಗಳು ಮೂಡುಬಿದಿರೆಯ ಪ್ರಗತಿಗೆ ಸಾಕಷ್ಟು ಉತ್ತೇಜನವನ್ನು ನೀಡಿದರು. ಈ ಸಮಯದಲ್ಲಿಯೇ ತುಳುನಾಡಿನಲ್ಲಿ ಹಲವಾರು ಸ್ಥಳೀಯ ರಾಜರು/ಅಧಿಕಾರಿಗಳು ಪ್ರವರ್ಧಮಾನಕ್ಕೆ ಬಂದರು. ಆ ರೀತಿ ಪ್ರವರ್ಧಮಾನಕ್ಕೆ ಬಂದ ಪ್ರಮುಖ ರಾಜಮನೆತನಗಳಲ್ಲಿ ಮೂಡುಬಿದಿರೆ ಸಮೀಪದಲ್ಲಿರುವ ಪುತ್ತಿಗೆಯನ್ನು ಕೇಂದ್ರವಾಗಿರಿಸಿಕೊಂಡು ಆಡಳಿತ ನಡೆಸುತ್ತಿದ್ದ ಚೌಟರ ಅರಸರು ಮನೆತನ ಮುಖ್ಯ ಆದದ್ದು.

ಚೌಟರು ಪುತ್ತಿಗೆಯಲ್ಲಿ ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಮೂಡುಬಿದಿರೆ ವಿಜಯ ನಗರ ಸಾಮ್ರಾಜ್ಯದ ಒಂದು ಭಾಗವಾಗಿ ಅದಾಗಲೆ ಪ್ರಸಿದ್ಧಿಪಡೆದಿತ್ತು. ಈ ಚೌಟ ಅರಸರು ನೆರೆ-ತೆರೆಯ ಅರಸು ಮನೆತನಗಳಾದ ಕಾರ್ಕಳದ ಭೈರರು, ಮುಲ್ಕಿಯ ಸಾಮಂತರು, ಬಂಗಾಡಿಯ ಬಂಗರು, ಪಣಂಬೂರಿನ ಹೆಗ್ಗಡೆಗಳು ಮುಂತಾದವರೊಡನೆ ನಿರಂತರ ಯುದ್ಧಗಳನ್ನು ನಡೆಸಿದವರು. ಶಾಂತಿ, ಒಪ್ಪಂದವನ್ನು ಮಾಡಿಕೊಂಡರು. ಪುನಃ ಪುನಃ ಯುದ್ಧಗಳನ್ನು ನಡೆಸಿದರು. ಚೌಟರಸರ ಇತಿಹಾಸ ಗಮನಿಸಿದಾಗ, ಅವರ ಬಹುಪಾಲು ಆದಾಯ, ಸಮಯ, ಎಲ್ಲವೂ ನಿರಂತರ ಯುದ್ಧಗಳಿಂದಾಗಿ ಜರ್ಜರಿತಗೊಂಡುದು ಸ್ಪಷ್ಟವಾಗುತ್ತದೆ. ಇವೆಲ್ಲದರ ನಡುವೆಯೂ ಚೌಟ ಅರಸರಿಗೆ ಮೂಡುಬಿದಿರೆ ಒಂದು ಆಕರ್ಷಣೆಯ ಕೇಂದ್ರ ಆಗಿತ್ತು. ಚೌಟರಿಗೆ ಇಷ್ಟಾದರೂ ಮೂಡುಬಿದಿರೆ ಮೇಲೆ ನೇರವಾದ ಅಧಿಕಾರ ಇರಲಿಲ್ಲ. ಇವೆಲ್ಲದರ ಜೈನಧರ್ಮೀಯರಾಗಿದ್ದ ಚೌಟರು ಮೂಡುಬಿದಿರೆಯ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಬದುಕಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವರಾಗಿದ್ದರು. ಮೂಡುಬಿದಿರೆಯ ಹಲವಾರು ಬಸದಿಗಳಿಗೆ, ಅಲ್ಲಿ ನಡೆಯುವ ಎಲ್ಲ ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವವರಾಗಿದ್ದರು. ಇತಿಹಾಸ ಪ್ರಸಿದ್ಧ ತ್ರಿಭುವನ ತಿಲಕ ಚೂಡಾಮಣಿ ಬಸದಿಯ ನಿರ್ಮಾಣ ಕಾಲದಲ್ಲಿ ಚೌಟರ ಕೊಡುಗೆ ಅನನ್ಯವಾದದ್ದು. ಈ ಚೌಟರು ೧೪ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಸುಮಾರು ೩೦೦ ವರ್ಷ ಆಳ್ವಿಕೆ ನಡೆಸಿದರು. ಕ್ರಿ.ಶ. ೧೯ನೇ ಶತಮಾನದ ವೇಳೆಗೆ ಈ ರಾಜವಂಶದ ಒಂದು ಟಿಸಿಲು ಮಂಗಳೂರಿನ ಬಳಿಯ ಉಳ್ಳಾಲದಿಂದಲೂ ರಾಜ್ಯಭಾರ ಮಾಡುತ್ತಿದ್ದಂತೆ ತಿಳಿದುಬರುತ್ತದೆ. ಕಾಲಾಂತರದಲ್ಲಿ ಚೌಟ ಅರಸರು ತಮ್ಮ ನೆಲೆಯನ್ನು ಪುತ್ತಿಗೆಯಿಂದ ಮೂಡುಬಿದಿರೆಗೆ ಸ್ಥಳಾಂತರಿಸಿದರು.

ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮೂಡುಬಿದಿರೆಯಲ್ಲಿ ರಾಜಕೀಯ ಸ್ಥಿತ್ಯಂತರಗಳು ಬಹಳ ವೇಗವಾಗಿ ನಡೆದವು. ಸ್ಥಾನೀಯ ರಾಜರುಗಳು ಪ್ರಾಬಲ್ಯವನ್ನು ಹೊಂದಿದ್ದರು. ಇದರ ಲಾಭವನ್ನು ಪೋರ್ಚಗೀಸರು ಪಡೆದರು. ಇದೇ ಸಮಯದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಕೆಳದಿ ಅರಸರ ಪ್ರಭಾವ ಮತ್ತು ಅಧಿಕಾರ ಕಾಣಿಸಿಕೊಂಡಿತು. ಕೆಳದಿ ಅರಸರು ವೀರಶೈವ ಮತಾವಲಂಬಿಗಳಾದ ಕಾರಣ ಜೈನಧರ್ಮ ರಾಜಕೀಯವಾಗಿ ಅನಾದರಣೆಗೆ ಒಳಗಾಯಿತು. ಇದು ಮೂಡುಬಿದಿರೆಯ ಬದುಕಿನ ಮೇಲೆಯೂ ತನ್ನ ಪ್ರಭಾವವನ್ನು ತೋರಿಸಿತು. ಜೈನ ಸಂಸ್ಕೃತಿ, ಕಲೆ, ಸಾಹಿತ್ಯದ ಬೆಳವಣಿಗೆ ಕುಂಠಿತವಾಯ್ತು. ಸು. ೧೭೬೩ರ ಹೊತ್ತಿಗೆ ಕೆಳದಿ ಅರಸು ಮನೆತನದ ಮೇಲೆ ಮೈಸೂರಿನ ಹೈದರ್ಆಲಿ ವಿಜ ಸಾಧಿಸಿದ. ಕೆಳದಿ ಸಾಮ್ರಾಜ್ಯದ ಪತನವಾಯ್ತು. ಇದರ ಪರಿಣಾಮವಾಗಿ ಮೂಡುಬಿದಿರೆ ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಆದರೆ ಇದು ಬಹಳ ಕಾಲ ಮುಂದುವರೆಯಲಿಲ್ಲ. ಟಿಪ್ಪೂ ಸುಲ್ತಾನನ ಪತನದೊಂದಿಗೆ ಮೂಡುಬಿದಿರೆ ನೇರವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು.

**ಮೂಡುಬಿದಿರೆ ನಗರಾಡಳಿತ**

ರಾಜಕೀಯವಾಗಿ ಹಲವಾರು ಏರಿಳಿತಗಳನ್ನು ಕಂಡ ನಡುವೆಯೂ ಮೂಡುಬಿದಿರೆಯ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಹೇಳಿಕೊಳ್ಳುವ ಮಟ್ಟಿಗೆ ವಿಶೇಷ ಏರುಪೇರು ಕಾಣಿಸಿಕೊಳ್ಳಲಿಲ್ಲ ಎಂಬುದು ಅಚ್ಚರಿಯ ಸಂಗತಿ. ಅಳುಪರ ಆಳ್ವಿಕೆಯ ಹೊತ್ತಿಗಾಗಲೆ ತುಳುನಾಡಿನ ಅತ್ಯಂತ ವಿಶಿಷ್ಟ ನಗರ ಎಂಬ ಕೀರ್ತಿಯನ್ನು ತನ್ನದಾಗಿಸಿಕೊಂಡಿದ್ದ ಮೂಡುಬಿದಿರೆ ತನ್ನ ಬದುಕಿನ ಸುವರ್ಣ ದಿನಗಳನ್ನು ಕಂಡದ್ದು ವಿಜಯನಗರ ಸಾಮ್ರಾಜ್ಯದ ದಿನಗಳಲ್ಲಿ. ಕ್ರಿ.ಶ. ೧೩೪೫ರಲ್ಲಿ ತುಳುನಾಡು ವಿಜಯನಗರ ಸಾಮ್ರಾಜ್ಯದ ಭಾಗವಾಗಿ ಮಾರ್ಪಟ್ಟಿತ್ತು. ಮೂಡುಬಿದಿರೆಯೂ ಇದಕ್ಕೆ ಹೊರತಾಗಿರಲಿಲ್ಲ. ಚೌಟ ಅರಸರ ರಾಜಧಾನಿ ಪುತ್ತಿಗೆಗೆ ಅತ್ಯಂತ ಸಮೀಪದಲ್ಲಿದ್ದರೂ ಆಡಳಿತ ದೃಷ್ಟಿಯಿಂದ ಮೂಡುಬಿದಿರೆ ಒಂದು ಸ್ವತಂತ್ರವಾದ ಸ್ವಯಮಾಡಳಿತ ವ್ಯವಸ್ಥೆಯನ್ನು ಪಡೆದುಕೊಂಡಿತ್ತು. ಚೌಟ ಅರಸರಿಗೆ ಆಡಳಿತಾತ್ಮಕವಾಗಿ ಮೂಡುಬಿದಿರೆಯ ಮೇಲೆ ಯಾವುದೇ ಅಧಿಕಾರ ಇರಲಿಲ್ಲ. ಇಲ್ಲಿರುವ ಹಲವು ಶಾಸನಗಳು ಹಾಗೂ ದಾಖಲೆ ಪತ್ರಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಆ ಹಂತದಲ್ಲಿ ಈ ನಗರವು "ವೇಣುಪುರದ ಎಂಟು ಪ್ರಜೆ ಸೆಟ್ಟಿಗಾರರು ನಾಲ್ವರು ಎಳಮೆಗೊಳಗಾದ ಸಮಸ್ತ ಹಲರು" ಎಂಬ ಸಮಿತಿಯಿಂದ ಆಳಲ್ಪಡುತ್ತಿತ್ತು. ಈ ಹೇಳಿಕೆಯನ್ನು ಗಮನಿಸಿದಾಗ ಮೂಡುಬಿದಿರೆಯ ನಗರಾಡಳಿತದಲ್ಲಿ

ವ್ಯಾಪಾರಸ್ಥರೂ, ವ್ಯವಸಾಯಗಾರರೂ ಅಧಿಕಾರ ಹೊಂದಿದ್ದರೆಂಬುದು ಖಚಿತವಾಗುತ್ತದೆ. ಈ ಸೆಟ್ಟಿಗಾರರು ಹಾಗೂ ಎಳಮೆಯವರು ಧಾರ್ಮಿಕವಾಗಿಯೂ ಬಹಳ ಪ್ರಭಾವಶಾಲಿಗಳಾಗಿದ್ದರು. ಗುರು ಬಸದಿಯ ಒಂದು ಶಾಸನದಲ್ಲಿ "ಗುರುಗಳ ಬಸ್ತಿಯ ಪಾರಿಶ್ವನಾಥನ ಸನ್ನಿಧಿಯಲ್ಲಿ ಸಂಘ ಸಮುದಾಯವ ಮುಂದಿಟ್ಟು ಎಂಟು ಮಂದಿ ಸೆಟ್ಟಿಕಾರರು, ನಾಲ್ವರು ಎಳಮೆಗೊಳಗಾದ ಸಮಸ್ತ ಹಲರ ವಸ ಮಾಡಿದಂತೆ" ಆ ದಾನವನ್ನು ಮಾಡಲಾಗಿತ್ತು. ತ್ರಿಭುವನ ತಿಲಕ ಚೂಡಾಮಣಿ ಬಸದಿಯ ನಿರ್ಮಾಣ ದಾಖಲೆಯ ಶಾಸನವು "ಶ್ರೀ ಮದ್ವೇಕಟಪುರದ ಎಂಟು ಪ್ರಜೆ ಸೆಟ್ಟಿಕಾರರು, ನಾಲ್ವರು ಎಳಮೆಗೊಳಗಾದ ಸಮಸ್ತ ಹಲರು ನಿರೂಪಿಸಿದ ತ್ರಿಭುವನ ಚೂಡಾಮಣಿ ಎಂಬ ಮಹಾ ಚೈತ್ಯಾಲಯ" ಎಂಬ ಮಾತೂ ಸೆಟ್ಟಿಕಾರರು ಹಾಗೂ ಎಳಮೆಯವರ ಆಡಳಿತಾತ್ಮಕ ಪ್ರಭಾವವನ್ನು ಸ್ಪಷ್ಟಗೊಳಿಸುತ್ತದೆ. ಇದರ ಜೊತೆಗೆ ವಿಜಯನಗರದರಸರ ಪ್ರತಿನಿಧಿಯೊಬ್ಬರು ಮೂಡುಬಿದಿರೆ ನಗರದ ಆಂತರಿಕ ಆಡಳಿತದ ನಿರ್ವಹಣೆಗಾಗಿ ನಿಯುಕ್ತರಾಗಿದ್ದರು. ಹಲವಾರು ಶಾಸನಗಳಲ್ಲಿ "ಬಿದಿರೆಯ ಸ್ಥಳದ ಅಧಿಕಾರಿ" ಎಂಬ ಉಲ್ಲೇಖಗಳಲ್ಲಿ ಕಂಡು ಬರುತ್ತದೆ. ಮೂಡುಬಿದಿರೆಯ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದ ಗಣಪಂತಾ, ಮಂಜಂಕಾ, ವಿಟ್ಟರಸ, ತಿಂಮಂಣ ಮುಂತಾದ ಹೆಸರುಗಳೂ ಶಾಸನಗಳಲ್ಲಿ, ದಾಖಲೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಈ ಸ್ಥಾನಿಕ ಅಧಿಕಾರಿಗಳು, ಸೆಟ್ಟಿಗಾರರು ಹಾಗೂ ಎಳಮೆಯವರೊಡಗೂಡಿ ಮೂಡುಬಿದಿರೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇಷ್ಟಾದರೂ ಆರ್ಥಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಮೂಡುಬಿದಿರೆ ಒಂದು ಮುಕ್ತ ನಗರವಾಗಿತ್ತೆಂದು ಶಾಸನಗಳು ಸೂಚಿಸುತ್ತದೆ. ಕರ್ನಾಟಕದ ವಿವಿಧ ಪ್ರದೇಶಗಳ ಅರಸುಗಳು, ಶ್ರೀಮಂತರು ಇಲ್ಲಿಯ ಜಿನ ಮಂದಿರಗಳಿಗೆ ಕೊಡುಗೆಗಳನ್ನು ಇತ್ತಿದ್ದರೆಂಬುದು ಕುತೂಹಲಕಾರಿ ಆಗಿದೆ. ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಮೂಡುಬಿದಿರೆಯನ್ನು ಹಲವು ಕೇರಿಗಳಾಗಿ ವಿಭಜಿಸಿದ್ದರು. ಬೆಟ್ಟಕೇರಿ ಮತ್ತು ಮಡಲಂಗಡಿ ಕೇರಿ ಎಂಬ ಎರಡು ಕೇರಿಗಳ ಪ್ರಸ್ತಾಪ ಶಾಸನಗಳಲ್ಲಿ ಕಂಡುಬರುತ್ತದೆ. ಆದರೂ ಇಂತಹ ಹಲವು ಕೇರಿಗಳು ಮೂಡುಬಿದಿರೆಯಲ್ಲಿ ಇತ್ತೆಂಬುದು ಸ್ಪಷ್ಟ.

**ನಗರಾಧೀಶ್ವರರು**

ಮೂಡುಬಿದಿರೆಯ ನಗರಾಡಳಿತ ವಿಚಾರವನ್ನು ವಿವರಿಸುವಾಗ ನಗರಾಧೀಶ್ವರರ ಪ್ರಸ್ತಾಪವನ್ನು ಮುಖ್ಯವಾಗಿ ಹೇಳಬೇಕಾಗುತ್ತದೆ. ದಿ. ಎಂ. ಗಣಪತಿರಾವ್ ಅವರು ಬರೆದಿರುವ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" ಮತ್ತು ದಿ|| ಲೋಕನಾಥಶಾಸ್ತ್ರಿ ಅವರ "ಮೂಡುಬಿದಿರೆ ಚರಿತೆ" ಎಂಬ ಎರಡು ಕೃತಿಗಳಲ್ಲಿ ಈ ವಿವರ ವಿಶೇಷವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಕ್ರಿ.ಶ. ೧ನೇ ಶತಮಾನದಲ್ಲಿ ಮೊಗಣೆನಾಡು ಸೀಮೆಗಳನ್ನು ಆಳಲಿಕ್ಕೆ ಬಲ್ಲಾಳರನ್ನು, ಹೆಗ್ಡೆಯವರನ್ನು ನಿಯಮಿಸಿದ ಮೇಲೆ ಈಗಿನ ಮುನಸಿಪಾಲಿಟಿ ಯೂನಿಯನ್ ಕ್ರಮದಂತೆ ನಗರ ಸಂಸ್ಥೆಗಳನ್ನು ಏರ್ಪಡಿಸಿದರು ಎಂದು ದಿ|| ಲೋಕನಾಥಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ. "ಮೇಲಿನ ಸಂಸ್ಥೆಗೆ ಕೇರಿಗಳಿಲ್ಲದ ಬರಿ ಪೇಟೆಯಾದರೆ, ಅದಕ್ಕೆ ಪೇಟೆ ಎಂದೂ, ಕೇರಿಗಳಿದ್ದರೆ ಪಟ್ಟಣವೆಂದೂ, ಪಟ್ಟದಲ್ಲಿ ಸುತ್ತಲೂ ಗಂಡಿ ಮಧ್ಯೆ ಕೋಟೆ, ಗಡಿಗಡಿಗಳಲ್ಲಿ 'ಗಂಡಿ' ಇದ್ದರೆ 'ಪುರ' ಎಂದೂ, ಲಕ್ಷ ಗುಡಿಗಟ್ಟು ಇದ್ದರೆ ನಗರವೆಂದೂ, ನಾಲ್ಕು ಲಕ್ಷ ಗುಡಿಗಳಿಗಿಂತ ಮೇಲಿರುವ ನಗರಕ್ಕೆ 'ಜಯಂತಿ' ಎಂದೂ ಪಟ್ಟಗಳನ್ನು ವಿಂಗಡಿಸಿದರು. (ಈ ಮೇಲಿನ ವಿವರಗಳನ್ನು ನೀಡುವಾಗ ದಿ|| ಶಾಸ್ತ್ರಿಗಳು ಇದಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ದಾಖಲೆಗಳೂ ಒದಗಿಸಿಲ್ಲ.) ಇವುಗಳ ಆಡಳಿತ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಪೇಟೆಯಲ್ಲಿ ೪ ಮಂದಿಯನ್ನು ಪಟ್ಟದಲ್ಲಿ ೮ ಮಂದಿಯನ್ನು ಪುರದಲ್ಲಿ ೧೨ ಮಂದಿಯನ್ನು, ನಗರದಲ್ಲಿ ೧೬ ಮಂದಿಯನ್ನು, ಜಯಂತಿಯಲ್ಲಿ ೨೦ ಮಂದಿಯನ್ನು ನೇಮಿಸಿದರು. ಈ ನಗರಾಧಿಕಾರಿಗಳಿಗೆ 'ಹಲ್ಲರು' ಎಂದು ಕರೆಯುತ್ತಿದ್ದರು. ಈ ಹಲ್ಲರಲ್ಲಿ ಬ್ರಾಹ್ಮಣ ಮೊದಲಾದ ನಾಲ್ಕೂ ವರ್ಣದವರಿದ್ದುದರಿಂದ ಇವರಿಗೆ ಚತುಸ್ಥಾನದವರೆಂದೂ ಕರೆಯುತ್ತಿದ್ದರು. ಈ ಹಲ್ಲರ ಮೇಲಿನ ಅಧಿಕಾರಿಯೆ ಪಟ್ಟಣಶೆಟ್ಟಿ. ಈ ಎಲ್ಲ ಅಧಿಕಾರಗಳೂ ವಂಶಪಾರಂಪರ್ಯವಾಗಿ ಬರುವಂತಹವಾಗಿದ್ದವು. ಪಟ್ಟಣಶೆಟ್ಟಿ ಮನೆತನ ಈಗಲೂ ಮೂಡುಬಿದಿರೆಯಲ್ಲಿ ಅಸ್ತಿತ್ವದಲ್ಲಿದೆ. ಜೈನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಇಂದಿಗೂ ಪ್ರಭಾವಯುತ ಸ್ಥಾನ-ಮಾನವನ್ನೂ ಪಡೆದುಕೊಂಡಿದೆ.

**ಆರ್ಥಿಕ ಸ್ಥಿತಿಗತಿ**

ಪ್ರಾಚೀನ ಕಾಲದಿಂದಲೂ ಮೂಡುಬಿದಿರೆ ತುಳುನಾಡಿನ ಸಂಪದ್ಭರಿತ ನಗರಗಳಲ್ಲಿ ಒಂದಾಗಿತ್ತು. ವ್ಯಾಪಾರ ಮತ್ತು ಕೃಷಿ ಇವರ ಆದಾಯದ ಮೂಲವಾಗಿತ್ತು. ಮೂಡುಬಿದಿರೆಯ ಸೆಟ್ಟಿಗಾರರು ಸಾಹಸಿಗಳು. ಇವರ ವಹಿವಾಟು ದೇಶ-ವಿದೇಶಗಳಲ್ಲಿ ಹರಡಿದ್ದಿತು. ಕ್ರಿ.ಶ. ೧೪ನೇ ಶತಮಾನದಿಂದ ೧೬ನೇ ಶತಮಾನದವರೆವಿಗೂ ಮೂಡುಬಿದಿರೆ ಒಂದು ಪ್ರಮುಖ ವಾಣಿಜ್ಯೋದ್ಯಮ ಕೇಂದ್ರವಾಗಿತ್ತು. ದೇಶ-ವಿದೇಶದ ಸರಕುಗಳಿಗೆ ಒಂದು ಮುಕ್ತ ಮಾರುಕಟ್ಟೆಯೂ ಆಗಿತ್ತು. ನವರತ್ನಗಳ ವ್ಯಾಪಾರಗಳಿಂದ ಇಲ್ಲಿಯ ವಣಿಕರು ಅಪಾರವಾದ ಸಂಪತ್ತು ಗಳಿಸಿದ್ದರು. ಚೀಣಾ ದೇಶದೊಂದಿಗೆ ಸಹಾ ವ್ಯಾಪಾರ ಸಂಪರ್ಕ ಹೊಂದಿದವರಾಗಿದ್ದರು. ಆ ದೇಶದ ರೇಷ್ಮೆ ಮುಂತಾದ ವಸ್ತ್ರಗಳಿಗೆ ಇಲ್ಲಿ ಭಾರೀ ಬೇಡಿಕೆ ಇತ್ತು, ಎಂಬ ಅಂಶವನ್ನು ಇಲ್ಲಿಯ ಕ್ರಿ.ಶ. ೧೪೩೦ರ ಶಾಸನವೊಂದು ಚಿತ್ರಿಸುತ್ತದೆ. ತ್ರಿಭುವನತಿಲಕ ಚೂಡಾಮಣಿ ಬಸದಿಯ ಹೊರವಲಯದಲ್ಲಿ ಶಿಲೆಯಲ್ಲಿ ಕೆತ್ತಲಾಗಿರುವ ಡ್ಯಾಗನ್ ಚಿತ್ರವು ಆ ಕಾಲದಲ್ಲಿ ಮೂಡುಬಿದಿರೆಯು ಚೀಣಾ ದೇಶದೊಂದಿಗೆ ಹೊಂದಿದ್ದ ಸಂಬಂಧಕ್ಕೆ ಸಾಕ್ಷಿಯಾಗಿದೆ. ವ್ಯಾಪಾರದಂತೆ ಕೃಷಿಯೂ ಮೂಡುಬಿದಿರೆಯ ಆರ್ಥಿಕತೆಯ ಅಡಿಪಾಯ ಆಗಿದ್ದಿತು. ಭತ್ತ, ಕಬ್ಬು ಮುಂತಾದ ಬೆಳೆಗಳ ಹೊಲಗಳಿಂದ, ಹೂ-ತೋಟಗಳಿಂದ, ಸುವ್ಯವಸ್ಥಿತವಾದ ರಸ್ತೆಗಳಿಂದ, ಹಲವಾರು ಕೆರೆಗಳಿಂದ ಮೂಡುಬಿದಿರೆ ರಮ್ಯವಾದ ಪಟ್ಟಣವಾಗಿತ್ತೆಂದು ಮೇಲಿನ ಶಾಸನದಿಂದ ತಿಳಿದು ಬರುತ್ತದೆ. ಇವೆಲ್ಲದರ ಜೊತೆಯಲ್ಲಿ ಮೂಡುಬಿದಿರೆ ಪ್ರಾಚೀನ ಕಾಲದಲ್ಲಿ ಪ್ರಮುಖ ವಿನಿಮಯ ಕೇಂದ್ರವೂ ಆಗಿತ್ತು. ಬಾರಕೂರು, ಮಂಗಳೂರುಗಳಲ್ಲಿ ಮುದ್ರಿಸಿದ ನಾಣ್ಯಗಳು ಇಲ್ಲಿ ವಿನಿಮಯ ಆಗುತ್ತಿದ್ದವು. 'ಬಾರಕೂರ ಗದ್ಯಾನ' 'ಮಂಗಲೂರು ಗದ್ಯಾನ' ಎಂಬ ಪ್ರಯೋಗಗಳು ಶಾಸನದಲ್ಲಿ ಇದೆ.

## ಧಾರ್ಮಿಕ ಸ್ಥಿತಿಗತಿ

ಮೂಡುಬಿದಿರೆ ಒಂದು ಆದರ್ಶನಗರ. ಇಲ್ಲಿ ಹಿಂದೂ-ಮುಸ್ಲಿಂ-ಕ್ರೈಸ್ತ-ಜೈನ ಧರ್ಮೀಯರು ಅತ್ಯಂತ ಸೌಹಾರ್ದತೆಯಿಂದ ಬಾಳುತ್ತಿರುವ ಒಂದು ಪುಟ್ಟ ಊರು. ಅಳುಪರು ಇಲ್ಲಿ ತಮ್ಮ ಆಳ್ವಿಕೆಯನ್ನು ನಡೆಸುತ್ತಿದ್ದ ಕಾಲದಲ್ಲಿ ಮೂಡುಬಿದಿರೆ ಅತ್ಯಂತ ಪ್ರಸಿದ್ಧವಾದ ಶಕ್ತ್ಯಾರಾಧನೆಯ ಕ್ಷೇತ್ರವಾಗಿ ಹೆಸರು ಪಡೆದಿತ್ತು. ಇಂದಿಗೂ ಜನಾಕರ್ಷಣೆಯ ಕೇಂದ್ರವಾಗಿರುವ ಗೌರಿ ದೇವಾಲಯ (ದುರ್ಗಾ ದೇವಾಲಯ) ಮೂಡುಬಿದಿರೆಯ ಅತ್ಯಂತ ಪ್ರಾಚೀನ ಶ್ರದ್ಧಾಕೇಂದ್ರವಾಗಿದ್ದು, ಅಳುಪ ದೊರೆಗಳ ಆಶ್ರಯದಲ್ಲಿ ತನ್ನ ಪ್ರಸಿದ್ಧಿಯ ತುದಿಯನ್ನು ತಲುಪಿತ್ತು. ಜೈನಧರ್ಮ ಮೂಡುಬಿದಿರೆಯಲ್ಲಿ ತನ್ನ ಬೇರುಗಳನ್ನು ಕಂಡುಕೊಂಡಿತು ಎಂಬ ವಿಚಾರದಲ್ಲಿ ಅಭಿಪ್ರಾಯ ಭೇದವಿದೆ. ಇತಿಹಾಸತಜ್ಞ ಡಾ|| ಪಿ.ಎಮ್. ನರಸಿಂಹಮೂರ್ತಿ ಅವರು "ಅಮ್ಮನವರ ಮತ್ತು ಲೆಪ್ಪದ ಬಸದಿಗಳಲ್ಲಿನ ಕುರುಹುಗಳನ್ನು ಸರಿಯಾಗಿ ಅವಲೋಕಿಸಿದರೆ ಕ್ರಿ.ಶ. ೮-೯ ನೇ ಶತಮಾನದ ವೇಳೆಗೆ ಜಿನಧರ್ಮ ಇಲ್ಲಿದ್ದುದು ಕಂಡುಬರುತ್ತದೆ. ಪ್ರಾಯಶಃ ಇಲ್ಲಿನ ಮಠ ಹಾಗೂ ಗುರು ಪರಂಪರೆ ಬೆಳವಣಿಗೆ ಹೊಯ್ಸಳರ ಕಾಲಕ್ಕೆ, ಸೇರಿರಬೇಕು" ಎಂದು ಅಭಿಪ್ರಾಯ ಪಡುತ್ತಾರೆ. ಬಹುಜನ ಇತಿಹಾಸ ತಜ್ಞರ ಅಭಿಮತದಂತೆ ಸುಮಾರು ಕ್ರಿ.ಶ. ೧೨ನೇ ಶತಮಾನದ ಹೊತ್ತಿಗೆ ಜೈನಧರ್ಮ ಮೂಡುಬಿದಿರೆಯಲ್ಲಿ ತನ್ನ ಗಟ್ಟಿಯಾದ ನೆಲೆಗಳನ್ನು ಕಂಡುಕೊಂಡಿತ್ತು. ಇಂದು ಮೂಡುಬಿದಿರೆಯನ್ನು 'ದಕ್ಷಿಣ ಜೈನ ಕಾಶಿ' ಎಂದು ಗುರುತಿಸುವಷ್ಟರ ಮಟ್ಟಿಗೆ ಜೈನಧರ್ಮ ಇಲ್ಲಿ ಜನಪ್ರಿಯತೆಯನ್ನು ಹೊಂದಿತು. ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯಲ್ಲಿ ಒಂದನ್ನೊಂದು ಮೀರಿಸಬಲ್ಲ ಅಪೂರ್ವವಾದ ೧೮ ಬಸದಿಗಳಿಂದಲೂ, ಇಲ್ಲಿಯ ಜೈನ ಗುರುಪೀಠದಿಂದಲೂ ಶ್ರೀಮಂತ ವಣಿಕ ವರ್ಗದಿಂದಲೂ, ರತ್ನಾಕರನಂತಹ ಅದ್ವಿತೀಯ ಕವಿಯಿಂದಲೂ ಮೂಡುಬಿದಿರೆಯ ಜೈನ ಇತಿಹಾಸ ವರ್ಣರಂಜಿತವಾಗಿದೆ.

## ಜೈನ ಗುರು ಪೀಠ

ಸ್ವರ್ಗೀಯ ಪಂ|| ಲೋಕನಾಥ ಶಾಸ್ತ್ರಿಗಳು ಮೂಡುಬಿದಿರೆ ಜೈನ ಮಠವು ಸು. ಕ್ರಿ.ಶ. ೧೧೨೦ರಲ್ಲಿ ಅಸ್ತಿತ್ವಕ್ಕೆ ಬಂದಿದೆ ಎಂದು ಅಭಿಪ್ರಾಯ ಪಡುವರು. ಲಭ್ಯ ಐತಿಹಾಸಿಕ ಆಧಾರಗಳ ಮೂಲಕ ಹೇಳುವುದಾದರೆ ಮೂಡುಬಿದಿರೆ ಜೈನಮಠಕ್ಕೆ ಸುಮಾರು ೬೦೦ ವರ್ಷಗಳ ಇತಿಹಾಸ ಇದೆ. ಕ್ರಿ. ಶ. ೧೩೮೪ರ ಮೂಡುಬಿದಿರೆ ಶಾಸನವೊಂದರಲ್ಲಿ ಅಳುಪದೊರೆ ಮೂರನೆ ಕುಲಶೇಖರನನ್ನು "ಶ್ರೀಮಚ್ಚಾರು ಕೀರ್ತಿ ದಿವ್ಯಶ್ರೀ

ಪಾದಪದ್ಮಾರಾಧಕರ್" ಎಂದು ಸಂಭೋದಿಸುತ್ತದೆ. ಈ ಶಾಸನದ ಹಿನ್ನೆಲೆಯಲ್ಲಿ ಜೈನಮಠದ ಪ್ರಾಚೀನತೆಯನ್ನು ಕ್ರಿ.ಶ. ೧೩೮೪ರ ಕಾಲದಿಂದ ಕನಿಷ್ಠ ಒಂದು ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದೆಂದು ಕಾಣುತ್ತದೆ.

**ಮೂಡುಬಿದಿರೆ ಜೈನಮಠ ಮತ್ತು ಶ್ರವಣಬೆಳಗೊಳ ಜೈನಮಠ**

ಬಹಳ ಜನಪ್ರಿಯವಾದ ಅರ್ಥದಲ್ಲಿ ಮೂಡುಬಿದಿರೆ ಮಠವನ್ನು ಇತಿಹಾಸ ಪ್ರಸಿದ್ಧ ಶ್ರವಣಬೆಳಗೊಳದ ಜೈನಮಠದ ಶಾಖಾಮಠ ಎಂಬ ಅರ್ಥದಲ್ಲಿ ಗುರ್ತಿಸುವ ಒಂದು ಪರಂಪರೆ ಇದೆ. ಬಹುಶಃ ಈ ಎರಡೂ ಗುರುಪೀಠಗಳಿಗೆ ಇರುವ ಸಮಾನ ಹೆಸರುಗಳಿಂದಲೂ, ಕೆಲವೊಮ್ಮೆ ಬಳಸಲ್ಪಡುವ ಸಮಾನವಾದ ಬಿರುದುಗಳಿಂದಲೂ ಇಂತಹಾ ಅಭಿಪ್ರಾಯ ಮೂಡಿರುವ ಸಂದರ್ಭವೂ ಇದೆ. ಅಲ್ಲದೆ ಮೂಡಿಬಿದಿರೆ ಸಮೀಪದ 'ನಲ್ಲೂರು' ಎಂಬಲ್ಲಿನ ಇಂದು ಅಸ್ತಿತ್ವದಲ್ಲಿ ಇರದ, ಆದರೂ ಹಿಂದಿನ ಎಲ್ಲಾ ಐತಿಹಾಸಿಕ ಕುರುಹುಗಳನ್ನು ದಟ್ಟವಾಗಿ ಉಳಿಸಿಕೊಂಡಿರುವ ಜೈನಮಠ ಮತ್ತು ಅದರ ಇತಿಹಾಸವನ್ನು ಅವಲೋಕಿಸಿದಾಗ, ಶ್ರವಣಬೆಳಗೊಳದ ಐತಿಹಾಸಿಕವಾಗಿಯೂ ಬಲಿಷ್ಟವಾದ ಜೈನ ಪರಂಪರೆಯನ್ನು ಅವಲೋಕಿಸಿದಾಗ ಒಂದು ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಮೂಡುಬಿದಿರೆ ಮತ್ತು ಅದರ ಮೂಲದ ನಲ್ಲೂರಿನ ಜೈನ ಮಠಗಳು ಶ್ರವಣಬೆಳಗೊಳದ ಶಾಖಾಮಠವಾಗಿಯೇ ಸ್ಥಾಪನೆ ಆಯ್ತು. ಈ ಎರಡೂ ಮಠಗಳಿಗೂ ಪ್ರಾರಂಭದಲ್ಲಿ ಶ್ರವಣಬೆಳಗೊಳದ ಶ್ರೀ ಮಠದ ದಟ್ಟವಾದ ನೆರಳಿನಲ್ಲಿಯೇ ತಮ್ಮ ಅಸ್ತಿತ್ವವನ್ನು ಗುರ್ತಿಸಿಕೊಂಡಿವೆ. ಈ ಐತಿಹಾಸಿಕ ಸತ್ಯವನ್ನು ಒಪ್ಪಿಕೊಂಡಾಗ ಮೂಡುಬಿದಿರೆ ಜೈನ ಮಠದ ಮಹತ್ತ್ವ ಏನೂ ಕಡಿಮೆ ಆಗುವುದಿಲ್ಲ. ಕ್ರಮೇಣ ರಾಜಕೀಯವಾಗಿಯೂ ಬಲಿಷ್ಟವಾದ ಮೂಡುಬಿದಿರೆ, ತನ್ಮೂಲಕವಾಗಿ ಇಲ್ಲಿನ ಜೈನಮಠಕ್ಕೂ ಸ್ವತಂತ್ರ ಅಸ್ತಿತ್ವವನ್ನು ದೊರಕಿಸಿ ಕೊಟ್ಟಿದೆ. ಮೂಲ ಯಾವುದೇ ಇದ್ದರೂ, ಮೂಡುಬಿದಿರೆಯ ಜೈನಮಠ ಹಂತ ಹಂತವಾಗಿ ಬೆಳೆಯುತ್ತ, ಜೈನಧರ್ಮದ ಏರುತ್ತಿದ್ದ ಜನಪ್ರಿಯತೆಯ ಜೊತೆಯಲ್ಲಿಯೆ, ತಾನೂ ಪ್ರಭಾವಶಾಲಿಯಾಗಿ ರೂಪುಗೊಂಡು, ಇಂದು ಈ ಊರಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಬದುಕಿನ ಒಂದು ಪ್ರಮುಖ ಅಂಗವಾಗಿ ಮಾರ್ಪಟ್ಟಿದೆ. ಮೂಡುಬಿದಿರೆಯ ಬಸದಿಗಳಲ್ಲಿರುವ ಆಂತರಿಕ ಹಾಗೂ ಬಾಹ್ಯ ಐತಿಹಾಸಿಕ ಸಂಗತಿಗಳನ್ನು ಗಮನಿಸಿದಾಗ, ಇಲ್ಲಿನ ಬಹುತೇಕ ಬಸದಿಗಳು ನಿರ್ಮಾಣ ಆದದ್ದು, ಇಲ್ಲಿನ ಗುರುಪೀಠದ ಪ್ರೇರೇಪಣೆಯಿಂದಲೆ ಎನ್ನಬಹುದು. ಬಹುತೇಕ ಶಾಸನಗಳಲ್ಲಿ "ಶ್ರೀ ಚಾರುಕೀರ್ತಿ ದೇವರ ನಿರೂಪದಿಂ ನಿರೂಪಿಸಿದರ್" ಎಂಬ ಹೇಳಿಕೆಗಳನ್ನು ಗಮನಿಸಿದಾಗ, ಈ ಮೇಲಿನ ಮಾತಿಗೆ ಆಧಾರ ದೊರಕುತ್ತದೆ. ಇದು ಮೂಡುಬಿದಿರೆಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಬದುಕಿನ ಮೇಲೆ ಗುರುಪೀಠಕ್ಕಿದ್ದ ಪ್ರಭಾವವನ್ನು ತೋರಿಸುತ್ತದೆ. ಇದರ ಜೊತೆಗೆ ಮೂಡುಬಿದಿರೆಯಲ್ಲಿ ಕಂಡುಬರುವ ಹಲವಾರು ಬಸದಿಗಳು, ಶಿಲಾಶಾಸನಗಳು, ತಾಮ್ರ ಶಾಸನಗಳು ಇಲ್ಲಿನ ನಿಶಿಧಿಗಳು ಮುಂತಾದವು ಕ್ರಿ.ಶ. ೧೪ನೇ ಶತಮಾನದಿಂದ ಕ್ರಿ.ಶ. ೧೯ನೇ ಶತಮಾನದವರೆಗಿನ ಜೈನ ಧರ್ಮದ ಉಚ್ಛ್ರಾಯ ಸ್ಥಿತಿಗೆ ಸಾಕ್ಷಿಯಾಗಿ ನಿಂತಿವೆ.

**ನಾಗಾರಾಧನೆ**

ಬಹುಮುಖಿ ಸಂಸ್ಕೃತಿಗೆ ತನ್ನನ್ನು ತಾನು ತೆರೆದುಕೊಂಡಿರುವ ಮೂಡುಬಿದಿರೆ ಒಂದು ಪ್ರಖ್ಯಾತ ನಾಗಾರಾಧನೆಯ ಸ್ಥಳವೂ ಹೌದು. ಕ್ರಿ.ಶ. ೧೪೦೭ರ ಗುರುಬಸದಿಯ ಶಾಸನದಲ್ಲಿ ಕಂಡುಬರುವ 'ಅಂಕುಶವಾಳದ ನಾಗರಬನ' ಎಂಬ ಉಲ್ಲೇಖ ಈ ಪ್ರದೇಶದ ನಾಗಾರಾಧನೆಯ ಪ್ರಾಚೀನತೆಯನ್ನು ಅರಿಯುವಲ್ಲಿ ಸಹಕಾರಿ ಆಗಿದೆ. ಅಲ್ಲದೆ ಇಲ್ಲಿರುವ ಗೋಪಾಲಕೃಷ್ಣ, ಮಹಲಿಂಗೇಶ್ವರ ಮುಂತಾದ ದೇವಾಲಯಗಳು ಈ ಪ್ರದೇಶದಲ್ಲಿ ಹಿಂದೂ ಧರ್ಮದ ಜನಪ್ರೀಯತೆಯನ್ನು ಎತ್ತಿ ತೋರಿಸುತ್ತದೆ.

**ಮೂಡುಬಿದಿರೆಯ ದೇವಾಲಯಗಳು ಮತ್ತು ಜೈನ ಬಸದಿಗಳು**

**೧. ಗೌರೀ ದೇವಾಲಯ**

ಲಭ್ಯ ದಾಖಲೆಗಳ ಪ್ರಕಾರ ಮೂಡುಬಿದಿರೆಯ ಅತಿಪ್ರಾಚೀನ ದೇವಾಲಯ. ಈ ದೇವಾಲಯಕ್ಕೆ ಸಂಬಂಧಿಸಿದ ಅತಿ ಪ್ರಾಚೀನ ಶಾಸನ ಕ್ರಿ.ಶ. ೧೨೦೫ರಲ್ಲಿ ದೊರಕಿದ್ದರೂ ಗಜಪೃಷ್ಟಾಕಾರದ ಈ ದೇವಾಲಯದ ಗರ್ಭಗೃಹದ ಅವಶೇಷವನ್ನು ಪರಿಶೀಲಿಸಿ, ಈ ದೇವಾಲಯವು ಕ್ರಿ.ಶ. ೧೦ನೇ ಶತಮಾನಕ್ಕೆ ಅನ್ವಯಿಸಬಹುದಾದದ್ದೆಂದು ದಿ|| ಡಾ|| ಗುರುರಾಜ ಭಟ್ಟರು ಅಭಿಪ್ರಾಯ ಪಟ್ಟಿದ್ದಾರೆ. ನಾಲ್ಕು ಅಡಿ ಎತ್ತರದ ಕಗ್ಗಲ್ಲಿನಿಂದ ಕೊರೆಯಲ್ಪಟ್ಟಿರುವ ಮಹಿಷಮರ್ಧಿನಿ ವಿಗ್ರಹವು ಅವಿಭಜಿತ ದ.ಕ. ಜಿಲ್ಲೆಯ ಶ್ರೇಷ್ಠ ಶಿಲ್ಪಗಳಲ್ಲಿ ಒಂದಾಗಿದೆ. ಬಾದಾಮಿ ಚಾಲುಕ್ಯರ ಶಿಲ್ಪಶೈಲಿಯನ್ನು ಹೋಲುತ್ತದೆ. "ವೃತ್ತಾಕಾರದ ವಿನ್ಯಾಸದ ಕೆಲವು ದೇವಾಲಯಗಳಿದ್ದರೂ ಬೌದ್ಧ ವಾಸ್ತುವನ್ನನುಕರಿಸುವ ಚೈತ್ಯಾಕಾರದ ದೇವಾಲಯಕ್ಕೆ ಇದೊಂದು ದೃಷ್ಟಾಂತ" ಎಂದು ಕೆಲವರ ಅಭಿಪ್ರಾಯ ಆಗಿದೆ. ಪಾಂಡ್ಯ ಚಕ್ರವರ್ತಿ ಒಂದನೆಯ ಕುಲಶೇಖರನ ಆಳ್ವಿಕೆಯ ಮತ್ತು ಎರಡನೆ ವೀರಪಾಂಡ್ಯದೇವನ ಆಳ್ವಿಕೆಗೆ ಸೇರಿದ ಶಾಸನಗಳು ಗೌರೀ ದೇವಾಲಯಕ್ಕೆ, ನೀಡಿದ ದಾನಗಳ ವಿಷಯದ ಕುರಿತಾಗಿ ಹೇಳುತ್ತದೆ.

**ಜೈನ ಬಸದಿಗಳು**

ಮೂಡುಬಿದಿರೆಯನ್ನು ಇಂದು "ದಕ್ಷಿಣ ಜೈನಕಾಶಿ" ಎಂದೇ ಗುರ್ತಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ಇಲ್ಲಿರುವ ಅತ್ಯಂತ ವೈಶಿಷ್ಟ್ಯಪೂರ್ಣವೂ, ವೈವಿಧ್ಯಮಯವೂ ಆಗಿರುವ ೧೮ ಜೈನ ಬಸದಿಗಳು. ಈ ಎಲ್ಲ ಬಸದಿಗಳು ವಾಸ್ತುಶಿಲ್ಪದ ದೃಷ್ಟಿಯಿಂದ ೧೫-೧೬ನೇ ಶತಮಾನದಲ್ಲಿ ರಚಿತವಾದವು. ಆದರೆ ಐತಿಹಾಸಿಕ ದಾಖಲೆಗಳ ಕೊರತೆಯಿಂದಾಗಿ ಇವುಗಳನ್ನು ಅವುಗಳ ರಚನೆಯ ಕಾಲಕ್ರಮದಂತೆ ಖಚಿತವಾಗಿ ಗುರ್ತಿಸುವುದಕ್ಕೆ ತೊಡಕುಗಳಿವೆ. ಕೆಲವು ಬಸದಿಗಳ ಬಗ್ಗೆ ಮಾತ್ರ ಅಗತ್ಯ ವಿವರಗಳು ದೊರೆಯುತ್ತದೆ. ಇವುಗಳಲ್ಲಿ ಹಿರೇ ಬಸದಿ ಅತ್ಯಂತ ಪ್ರಾಚೀನವಾದದ್ದು. ಆದರೆ ಇಲ್ಲಿರುವ ಶಾಸನದ ಅಕ್ಷರಗಳು ಅಳಿಸಿ ಹೋಗಿರುವುದರಿಂದ ನಿರ್ಮಾಣ ಕಾಲವನ್ನು ನಿಖರವಾಗಿ ಹೇಳುವುದು ಕಷ್ಟ. ಆದರೆ, ೧೫೩೯ರಲ್ಲಿ ಈ ಬಸದಿಯ ನಮಸ್ಕಾರ ಮಂಟಪದ ಜೀರ್ಣೋದ್ಧಾರ ನಡೆಯಿತೆಂದು ಒಂದು ಕಂಬದಲ್ಲಿ ಕೆತ್ತಿದ ಶಾಸನದಿಂದ ತಿಳಿಯಲ್ಪಡುತ್ತದೆ. ಮೂಡುಬಿದಿರೆಯ ಬಸದಿಗಳಲ್ಲಿ ಗುರುಗಳ ಬಸದಿ ಅತ್ಯಂತ ಮಹತ್ತ್ವವಾದದ್ದು. ಬಸದಿಯ ಮೂಲ ನಾಯಕ ಭಗವಾನ್ ಪಾರ್ಶ್ವನಾಥ ಸ್ವಾಮಿ. ಇದು ೯ ಅಡಿ ಎತ್ತರದ ಕಾರ್ಯೋತ್ಸರ್ಗದ ಕರಿಶಿಲೆಯ ಮನೋಜ್ಞವಾದ ಬಿಂಬ. ಈ ವಿಗ್ರಹವನ್ನು ಶಾಲಿವಾಹನ ಶಕ ೬೩೬ರಲ್ಲಿ (ಕ್ರಿ.ಶ. ೭೧೪) ಇಲ್ಲಿಯ ಶ್ರಾವಕರು ಪ್ರತಿಷ್ಠಿಸಿದರು ಎಂದು ಮೂಲ ವಿಗ್ರಹದ ಸಿಂಹಪೀಠದಿಂದ ತಿಳಿದುಬರುತ್ತದೆ. ಹೊರಗಿನ ಗದ್ದಿಗೆ ಮಂಟಪವನ್ನು ಕ್ರಿ.ಶ. ೧೧೩೮ರಲ್ಲಿ ಕಟ್ಟಿಸಿದರೆಂದು ಮಂಟಪದ ಶಾಸನದಲ್ಲಿ ಹೇಳಲಾಗಿದೆ. ಮೂಡುಬಿದಿರೆ ಮಠಾಧೀಶರ ಪಟ್ಟಾಭಿಷೇಕ ಕಾರ್ಯಕ್ರಮಗಳೂ ಈ ಬಸದಿಯ 'ಚಂದನದ ಪೀಠದಲ್ಲಿ' ನಡೆಯುತ್ತದೆ ಎಂಬುದು ಗಮನಾರ್ಹ ಸಂಗತಿ. ಈ ಬಸದಿಗೆ 'ಸಿದ್ಧಾಂತ ಬಸದಿ' ಎಂಬ ಪರ್ಯಾಯ ಹೆಸರೂ ಇದೆ. ಜೈನಧರ್ಮದ ಸೈದ್ಧಾಂತಿಕ ಅಡಿಗಲ್ಲೆಂದು ಪ್ರಾಜ್ಞರು ಗುರ್ತಿಸಿರುವ 'ಧವಲಾ' 'ಜಯ ಧವಲಾ' 'ಮಹಾ ಧವಲಾ' ಎಂಬ ಅಪೂರ್ವ ಕೃತಿಗಳು ಈ ಬಸದಿಯಲ್ಲಿಯೆ ಸಂರಕ್ಷಿಸಲ್ಪಟ್ಟಿತ್ತು. ಜೊತೆಗೆ ಅತ್ಯಪೂರ್ವವೂ, ಅನ್ಯತ್ರ ದುರ್ಲಭವೂ ಆದ ನವರತ್ನಗಳಿಂದ ನಿರ್ಮಿತವಾದ ಜಿನ ಬಿಂಬಗಳಿಂದಲೂ ಗುರುಬಸದಿ ಅತ್ಯಂತ ಮಹತ್ವದ್ದಾಗಿದ್ದು ಈ ಬಿಂಬಗಳ ದರ್ಶನಕ್ಕಾಗಿಯೆ ದೇಶ-ವಿದೇಶಗಳಿಂದ ಶ್ರದ್ಧಾವಂತರು ಪ್ರತಿನಿತ್ಯ ಮೂಡುಬಿದಿರೆಗೆ ಆಗಮಿಸುತ್ತಾರೆ. 'ಲೆಪ್ಪದ ಬಸದಿ' ಮೂಡುಬಿದಿರೆ ಬಸದಿ ಸಮೂಹಗಳಲ್ಲಿ ಅತ್ಯಂತ ಭಿನ್ನವಾದದ್ದು. ವಿಶಿಷ್ಟವಾದ ಮಣ್ಣಿನ ಲೆಪ್ಪದಿಂದ ಮಾಡಿದ ೪ ಅಡಿ ಉನ್ನತವಾದ ಶ್ವೇತ ವರ್ಣದ ಪಲ್ಯಂಕಾಸನದಲ್ಲಿ ಮಂಡಿತರಾದ ಭಗವಾನ್ ಚಂದ್ರನಾಥ ಸ್ವಾಮಿಯ ವಿಗ್ರಹವು ಗರ್ಭಗುಡಿಯಲ್ಲಿದೆ. ಹೊರಗಿನ ಯಕ್ಷಮಂಟಪದಲ್ಲಿ ಬಲಬದಿಯಲ್ಲಿ ಶ್ಯಾಮಯಕ್ಷ ಮತ್ತು ಎಡಬದಿಯಲ್ಲಿ ಅಷ್ಟಭುಜಗಳಿಂದ ಶಸ್ತ್ರಾಲಂಕೃತೆಯಾದ ಜ್ವಾಲಾಮಾಲಿನಿ ದೇವಿಯ ಸುಂದರವಾದ ಮಣ್ಣಿನ ವಿಗ್ರಹಗಳಿವೆ. ಮಣ್ಣಿನ ಮೂರ್ತಿಗಳಿಂದಾಗಿ ಈ ಬಸದಿ 'ಲೆಪ್ಪದ ಬಸದಿ' ಎಂದು ಕರೆಸಿಕೊಂಡಿದೆ. ಜನರ ನಾಲಿಗೆಯ ಮೇಲೆ 'ಹೊಸ ಬಸದಿ' ಎಂದು ಕರೆಯಲ್ಪಡುವ "ತ್ರಿಭುವನ ತಿಲಕ ಚೂಡಾಮಣಿ ಬಸದಿ" ಇಲ್ಲಿನ ಇತರ ಎಲ್ಲ ಬಸದಿಗಳಿಗಿಂತಲೂ ದಿವ್ಯವೂ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯಿಂದ ಭವ್ಯವೂ ಆಗಿದೆ. ಮೂಡುಬಿದಿರೆ 'ಜೈನಕಾಶಿ' ಆಗುವುದರಲ್ಲಿ ಈ ಬಸದಿಯ ಕೊಡುಗೆ ಅಪೂರ್ವವಾದದ್ದು. ಅಧಿಕ ಸಂಖ್ಯೆಯಲ್ಲಿ ಶಿಲಾ ಕಂಭಗಳು ಇರುವುದರಿಂದಾಗಿ ಇದನ್ನು 'ಸಾವಿರ ಕಂಬದ ಬಸದಿ' ಎಂದೂ ಕರೆಯುತ್ತಾರೆ. ಬಸದಿಯು ವಿಶಾಲವಾಗಿದ್ದು ಮೂರು ಅಂತಸ್ತಿನಿಂದ ಕೂಡಿದೆ. ಹೊರಗಿನಿಂದ ಪ್ರವೇಶಿಸುವಾಗ ಗೋಪುರ ದ್ವಾರ

ಮಂಟಪ, ಭೈರಾದೇವಿ ಮಂಟಪ ಚಿತ್ರಾದೇವಿ ಮಂಟಪ, ನಮಸ್ಕಾರ ಮಂಟಪ, ತೀರ್ಥಂಕರ ಮಂಟಪ, ಲಕ್ಷ್ಮೀ ಮಂಪಟ, ಮತ್ತು ಗರ್ಭಗೃಹ ಮಂಟಪಗಳೆಂಬ ಏಳು ಮಂಟಪಗಳು ಪರಸ್ಪರ ಬೆಸೆದುಕೊಂಡು ಉದ್ದಕ್ಕೆ, ಚಾಚಿಕೊಂಡಿದೆ. ಗರ್ಭಗೃಹದಲ್ಲಿ ಪಂಚಲೋಹ ನಿರ್ಮಿತವಾದ ೯ ಅಡಿ ಎತ್ತರದ ಶ್ರೀ ಚಂದ್ರನಾಥ ಸ್ವಾಮಿಯ ವಿಗ್ರಹವು ವಿರಾಜಿಸುತ್ತದೆ. ಈ ಬಸದಿಯು ಮೂರು ಹಂತಗಳಲ್ಲಿ ನಿರ್ಮಾಣ ಆಗಿದೆ. ಮೊದಲ ಹಂತದ ನಿರ್ಮಾಣವು ಕ್ರಿ.ಶ. ೧೪೩೦ರಲ್ಲಿ. ಈ ಬಸದಿಯ ಒಳಗೋಡೆಯಲ್ಲಿರುವ ೨೯.೧.೧೯೪೦ರ ಶಾಸನವು ಈ ಜಿನಮಂದಿರವನ್ನು ವಿಜಯನಗರದ ಅರಸ ಎರಡನೆ ದೇವತಾಯನ ಆಳ್ವಿಕೆಯಲ್ಲಿ, ಆತನ ನಿರೂಪದಿಂದ ಮಂಗಳೂರು ರಾಜ್ಯದ ರಾಜ್ಯಪಾಲ ದೇವರಾಜ ಒಡೆಯನು ಅಭಿನವ ಚಾರುಕೀರ್ತಿ ಪಂಡಿತ ದೇವರಿಗೆ ಜಿನಾಲಯ ನಿರ್ಮಾಣಾರ್ಥವಾಗಿ ಕೊಟ್ಟ ಕ್ಷೇತ್ರದಲ್ಲಿ ಶಾರಿಕೆನಾಡು ಚೌಟರು ಹಾಗೂ ೬ ಮಂದಿ ಬಲ್ಯಾಳದ ಸಹಾಯದಿಂದ ಮೂಡುಬಿದಿರೆಯ ಎಂಟು ಪ್ರಜೆ ಸೆಟ್ಟಿಕಾರರು, ನಾಲ್ವರು ಎಳಮೆಯವರು, ಸಮಸ್ತ ಹಲರು ಜಗತ್ತಿಗೆ ಆಶ್ಚರ್ಯ ಉಂಟುಮಾಡುವ ರೀತಿಯಲ್ಲಿ ನಿರ್ಮಿಸಿದರೆಂದು ತಿಳಿಯುತ್ತದೆ. ೨೭.೩.೧೪೩೦ ನೆಯ ಚೈತ್ರ ಶುದ್ಧ ಪಂಚಮಿಯ ರವಿವಾರದಂದು ಬಸದಿಯ ಮೊದಲ ಹಂತದ ನಿರ್ಮಾಣ ಕಾರ್ಯವು ಮುಗಿಯಿತು. ತರುವಾಯ ಮೂಡುಬಿದಿರೆಯ ೬೦ ಮಂದಿ ಸೆಟ್ಟಿಗಳು ೭-೪-೧೯೫೧ರಂದು ಎರಡನೆ ಹಂತದ ನಿರ್ಮಾಣಕಾರ್ಯ ನಡೆಯಿತು. ಈ ಬಸದಿಯು ತನ್ನ ಮೂರನೆ ಹಂತದ ವಿಸ್ತರಣೆಯನ್ನು ೧೪೬೨ ರಲ್ಲಿ ನೆರವೇರಿಸಲಾಯ್ತು. ವಿಜಯ ನಗರದ ಭೈರವರಾಯನು ಬಸದಿಯ ಮೂರನೆಯ ನೆಲೆಗೆ ತಾಮ್ರದ ಹೊದಿಕೆ, ಧ್ವಜ ಸ್ಥಂಭಕ್ಕೆ, ತಾಮ್ರದ ತಗಡನ್ನು ಹೊದಿಸಿ, ಅನೇಕ ಬೆಳ್ಳಿಯ ಪೂಜಾ ಸಾಮಗ್ರಿಗಳನ್ನು ನೀಡಿದನು. ಆತನ ಪಟ್ಟದ ರಾಣಿ ನಾಗಲಾದೇವಿಯು ಬಸದಿಯ ಮುಂಭಾಗದಲ್ಲಿ ೫೦ ಅಡಿ ಎತ್ತರದ ಮಾನಸ್ತಂಭವನ್ನು ಮಾಡಿಸಿದಳೆಂದು ಇಲ್ಲಿಯ ಅನೇಕ ಶಾಸನಗಳು ನಿರೂಪಿಸುತ್ತವೆ ಎಂಬುದಾಗಿ ಪಂ|| ದೇವಕುಮಾರ ಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ. ಆದರೆ ಈ ಬಸದಿಯ ರಚನಾ ಸ್ವರೂಪದ ಹಿನ್ನೆಲೆಯಲ್ಲಿ ಗುರ್ತಿಸಿದಾಗ ಬಸದಿಯ ನಿರ್ಮಾಣದ ಮೊದಲ ಹಂತ ಗರ್ಭಗುಡಿಯಿಂದ ಚಿತ್ರಾದೇವಿ ಮಂಟಪದವರೆವಿಗೂ, ಎರಡನೆ ಹಂತ ಭೈರಾದೇವಿ ಮಂಟಪವೆಂದೂ, ಮೂರನೆಯಹಂತ ನಾಗಲಾದೇವಿಯಿಂದ ನಿರ್ಮಾಣವಾದ ಮಾನಸ್ತಂಭ ಮತ್ತು ಆನಂತರದ ರಚನೆ ಎನ್ನಬಹುದು. ಗರ್ಭಗೃಹದಿಂದ ಚಿತ್ರಾದೇವಿ ಮಂಟಪ, ರತ್ನಾಕರ ಪೀಠದವರೆಗಿನ ವಾಸ್ತುವಿನಲ್ಲಿ ಏಕರೂಪತೆ ಇದೆ. ಚಿತ್ರಾದೇವಿ ಮಂಟಪಕ್ಕೆ ಮುಂದುವರೆದ ಸ್ವರೂಪದಲ್ಲಿದ್ದರೂ ಸ್ವತಂತ್ರತೆಯನ್ನು ಭೈರಾದೇವಿ ಮಂಟಪ ಕಾಯ್ದುಕೊಂಡಿದೆ. ಆದುದರಿಂದ ಮೊದಲ ರಚನೆಯು ಚಿತ್ರಾದೇವಿ ಮಂಟಪದವರೆಗೆ ರಚಿತವಾಗಿತ್ತು ಎಂದು ಊಹಿಸುವುದು ಹೆಚ್ಚು ಸಮಂಜಸವೆಂದು ನನ್ನ ಭಾವನೆ. ಒಟ್ಟಿನಲ್ಲಿ ಈ ಬಸದಿಯು ಒಗ್ಗಟ್ಟಿನ ಪ್ರತೀಕದಂತಿದ್ದು ಇದರಲ್ಲಿ ಮೂಡುಬಿದಿರೆಯ ಸಮಸ್ತ ಶ್ರಾವಕರು, ಸೆಟ್ಟಿಗಾರರು, ಎಳವೆಯವರು, ಆಳರಸರು- ಹೀಗೆ ಎಲ್ಲ ವರ್ಗದ ಕೊಡುಗೆಗಳ ಮೂಲಕ ೧೪೩೦ರಲ್ಲಿ ನಿರ್ಮಾಣಕಾರ್ಯ ಪ್ರಾರಂಭಗೊಂಡು ೧೪೭೬ರಲ್ಲಿ ಇಂದಿನ ಸ್ವರೂಪವನ್ನು ಪಡೆಯಿತು. ಹೊಸ ಬಸದಿಯ ಪ್ರಮುಖ ಆಕರ್ಷಣೆ ಎಂದರೆ ಭೈರಾದೇವಿ ಮಂಟಪದಲ್ಲಿರುವ ಅತ್ಯಪೂರ್ವವಾದ ಶಿಲಾಸ್ತಂಭಗಳು. ಇಲ್ಲಿಯ ಒಂದೊಂದು ಕಂಬಗಳೂ ವೈವಿಧ್ಯಮಯವೂ, ಭವ್ಯವೂ ಆಗಿದ್ದು ನೋಡುಗರನ್ನು ಮಂತ್ರ ಮುಗ್ಧಗೊಳಿಸುತ್ತವೆ. ಮಂಟಪದ ಹೊರವಲಯದಲ್ಲಿ ವಿವಿಧ ಪ್ರಾಣಿಗಳ, ಕುದುರೆ ಸವಾರರ, ಯುದ್ಧ ಸನ್ನದ್ಧ ಸೈನಿಕರ, ಉಬ್ಬುಶಿಲ್ಪಗಳಿವೆ. ಜಿಂಘೆಗೆ ನೊಗ ಹೂಡಿರುವ ಮತ್ತು ಡ್ರ್ಯಾಗನ್‌ನ ಉಬ್ಬು ಚಿತ್ರಗಳು ನೋಡುಗರನ್ನು ಚಕಿತಗೊಳಿಸುತ್ತದೆ. ಈ ಬಸದಿಯ ಅತ್ಯಪೂರ್ವ ಶಿಲ್ಪಕಲಾ ಸೌಂದರ್ಯವನ್ನು, ಇಲ್ಲಿಯ ವಾಸ್ತು ವೈಭವವನ್ನು ಪರಿಭಾವಿಸಿಯೆ ಇಲ್ಲಿಯ ಶಾಸನವೊಂದರಲ್ಲಿ ಉಕ್ತವಾಗಿರುವ "ಮಹಾ ಚೈತ್ಯಾಲಯಾ ಜಗದಾಶ್ಚರ್ಯಮಪ್ಪಂತು ನಿರ್ಮಿಸಿದರು" "ಶಿಲ್ಪಕೌಶಲಮಂ ಭಾವಿಸಿ ವಿಶ್ವಕರ್ಮ ನಡುಗಿಂದಂ ಶೀರ್ಷಮಂ ತೂಗುವಂ" ಎಂಬ ಹೇಳಿಕೆಗಳು ಅರ್ಥಪೂರ್ಣ ಎನ್ನಿಸುತ್ತದೆ. ಹಿರೇ ಬಸದಿಯಿಂದ ತೊಡಗಿ ಹೊಸ ಬಸದಿವರೆಗಿನ ೧೮ ಬಸದಿಗಳೂ ಒಂದಕ್ಕಿಂತ ಒಂದು ವಿಭಿನ್ನವಾಗಿದ್ದು ಅವುಗಳ ಸ್ಥೂಲ ವಿವರಗಳು ಈ ಕೆಳಗಿನಂತೆ ಇದೆ.

| **ಕ್ರ.ಸಂ.** | **ಬಸದಿ ವಿವರ** | **ಮೂಲ ಸ್ವಾಮಿ** |
|---|---|---|
| ೧. | ಹಿರೇ ಬಸದಿ (ಅಮ್ಮನವರ ಬಸದಿ) | ಶಾಂತಿನಾಥ ಸ್ವಾಮಿ. |
| ೨. | ಬಡಗ ಬಸದಿ | ಚಂದ್ರನಾಥ ಸ್ವಾಮಿ. |

| | | |
|---|---|---|
| ೩. | ಪಡು ಬಸದಿ | ಅನಂತನಾಥ ಸ್ವಾಮಿ. |
| ೪. | ಶೆಟ್ರ ಬಸದಿ | ಮಹಾವೀರ ಸ್ವಾಮಿ. |
| ೫. | ಬೆಟ್ಕೇರಿ ಬಸದಿ | ಮಹಾವೀರ ಸ್ವಾಮಿ. |
| ೬. | ಕೋಟಿ ಶೆಟ್ಟರ ಬಸದಿ | ನೇಮಿನಾಥ ಸ್ವಾಮಿ. |
| ೭. | ವಿಕ್ರಮ ಶೆಟ್ಟಿ ಬಸದಿ | ಆದಿನಾಥ ಸ್ವಾಮಿ. |
| ೮. | ಕಲ್ಲು ಬಸದಿ | ಶೀತಲನಾಥ (ಮೂಲಃ ಚಂದ್ರನಾಥಸ್ವಾಮಿ). |
| ೯. | ದೇರಮ್ಮ ಶೆಟ್ಟಿ ಬಸದಿ | ಆದಿನಾಥ ಸ್ವಾಮಿ. |
| ೧೦. | ಲೆಪ್ಪದ ಬಸದಿ | ಚಂದ್ರನಾಥ ಸ್ವಾಮಿ. |
| ೧೧. | ಚೋಳ ಶೆಟ್ಟಿ ಬಸದಿ | ಪದ್ಮಪ್ರಭ ಸ್ವಾಮಿ. |
| ೧೨. | ಮಹದೇವ ಶೆಟ್ಟಿ ಬಸದಿ | ಆದಿನಾಥ ಸ್ವಾಮಿ. |
| ೧೩. | ಬೈಕಣಸಿ ಕಾರಿ ಬಸದಿ | ಅನಂತನಾಥ ಸ್ವಾಮಿ. |
| ೧೪. | ಕೆರೆ ಬಸದಿ | ಮಲ್ಲಿನಾಥ ಸ್ವಾಮಿ. |
| ೧೫. | ಪಾಠಶಾಲೆ ಬಸದಿ | ಮುನಿಸುವ್ರತ ಸ್ವಾಮಿ. |
| ೧೬. | ಮಠದ ಬಸದಿ | ಪಾರ್ಶ್ವನಾಥ ಸ್ವಾಮಿ. |
| ೧೭. | ಗುರು ಬಸದಿ | ಪಾರ್ಶ್ವನಾಥ ಸ್ವಾಮಿ. |
| ೧೮. | ತ್ರಿಭುವನ ತಿಲಕ ಚೂಡಾಮಣಿ ಬಸದಿ. (ಹೊಸ ಬಸದಿ) | ಚಂದ್ರನಾಥ ಸ್ವಾಮಿ. |

ಈ ೧೮ ಜೈನ ಬಸದಿಗಳಲ್ಲದೆ ಪ್ರಾಚೀನಜೈನ ಸಮಾಧಿಗಳೂ ವಾಸ್ತುವಿನ ದೃಷ್ಟಿಯಿಂದಲೂ ಅತ್ಯಂತ ವಿಶಿಷ್ಟ ರಚನೆಗಳು. ಮೂರು, ಐದು, ಹಾಗೂ ಏಳು ಹಂತಗಳಲ್ಲಿ ಪಿರಮಿಡ್ ಆಕಾರವನ್ನು ಹೋಲುವಂತೆ ಇವುಗಳನ್ನು ಮುರಕಲ್ಲಿನಲ್ಲಿ ರಚಿಸಲಾಗಿದೆ. ಇಂತಹಾ ರಚನೆಗಳನ್ನು ಶಾಸನಗಳಲ್ಲಿ 'ಮುಡಿಜ' ಎಂದು ಹೆಸರಿಸಿದ್ದಾರೆ. ಬ್ರಂಮ್ಮಚಾರಿ ಮಡೆದೇವರು ಸೆಟ್ಟಿಯವರಿಗೆ ಕಟ್ಟಾದ ಮುಂಡಿಂಜ, ಚಾರುಕೀರ್ತಿ ಪಂಡಿತ್ತಯ್ಯಗಳ ಶಿಷ್ಯ ವರ್ಧಮಾನ ಅಂಶಗಳ ಗುಡ್ಡ ಬಾಗಿಸೆಟ್ಟಿ ಬಳಿಯ ಯೆಳವೆಯ ಸೆಟ್ಟಿ ಕಾಂತಣ್ಣಸೆಟ್ಟಿ ಕಟ್ಟಿದ ಮುಂಡಿಜ ಎಂಬಂತಹ ಹೇಳಿಕೆಗಳನ್ನು ಇಲ್ಲಿ ಗಮನಿಸಬಹುದು. ಇಂತಹುದೆ ರಚನೆಗಳನ್ನು ಹಳೆಯಂಗದೆ, ಸವಣೂರು, ಹೊಸಂಗಡಿ ಹಾಗೂ ಅಳದಂಗಡಿಗಳಲ್ಲಿಯೂ, ಕಂಡುಬಂದಿವೆ. ಸಮೀಪದ ಕೋಡಂಗಲ್ಲಿನಲ್ಲಿರುವ ನ್ಯಾಯ ಬಸದಿ ಎಂದು ಪ್ರಸಿದ್ಧವಾದ ಚಂದ್ರಕೀರ್ತಿ ಮುನಿಗಳ ನಿಷಧಿ ಮಂಟಪವೂ ಗಮನಾರ್ಹವಾದದ್ದು.

# ಮೂಡುಬಿದಿರೆಯ ವೈಶಿಷ್ಟ್ಯ (೨)

**ಇನ್ನಿತರ ಗಮನಾರ್ಹ ರಚನೆಗಳು**

ಮೂಡುಬಿದಿರೆಯ ಪ್ರಖ್ಯಾತವಾದ ಹದಿನೆಂಟು ಬಸದಿಗಳು ಮತ್ತು ನಿಸಿಧಿಗಳನ್ನು ಹೊರತು ಪಡಿಸಿದರೆ ಚೌಟರ ಅರಮನೆ ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ತ್ವವಾದದ್ದು…. ಪುತ್ತಿಗೆಯನ್ನು ತಮ್ಮ ಕಾರ್ಯಕ್ಷೇತ್ರ ಅನಿಸಿಕೊಂಡಿದ್ದ ಚೌಟರು ಮೂಡುಬದಿದಿರೆಗೆ ಸ್ಥಳಾಂತರಗೊಳ್ಳುವಾಗ ಈಗಿರುವ ಚೌಟರ ಅರಮನೆ ನಿರ್ಮಾಣವಾಯ್ತು, ಪ್ರಾಯಶಃ ೧೬೪೩ರ ಸುಮಾರಿನಲ್ಲಿ ನಿರ್ಮಿತವಾಗಿರುವ ಈ ಭವ್ಯ ಅರಮನೆ ತನ್ನ ಕಾಷ್ಠ ಶಿಲ್ಪಕ್ಕೆ ಹೆಸರಾಗಿದೆ…. 'ಪಂಚನಾರಿ ತುರಗ' ಮತ್ತು 'ನವನಾರಿ ಕುಂಜರದ' ರಚನಾ ಚಾತುರ್ಯ ನೋಡುಗರನ್ನು ಮಂತ್ರಮುಗ್ಧ ಗೊಳಿಸುತ್ತದೆ. (ಇವೇ ಕೆತ್ತನೆಯನ್ನು ಹೊಸ ಬಸದಿಯೆ ಭವ್ಯವಾದ ಪ್ರವೇಶ ದ್ವಾರದ ಎಡ ಮತ್ತು ಬಲ ಬಾಗಿಲುಗಳ

ಮೇಲೆಯೂ ಗಮನಿಸಬಹುದು.) ಹುಲಿ ಮುಖದ ಚಾವಡಿ, ಹೊರಗಿನ ಚಾವಡಿ, ಪಟ್ಟದ ಚಾವಡಿ, ಒಡ್ಡೋಲಗ, ಅಂತಃಪುರ, ಸ್ನಾನದ ಕೊಳ ಮುಂತಾದ ವಿಭಾಗಗಳನ್ನು ಹೊಂದಿದ್ದ ಚೌಟರ ಅರಮನೆ ಮೂಡುಬಿದಿರೆಯ ಇತಿಹಾಸದ ಪ್ರತ್ಯಕ್ಷ ಸಾಕ್ಷಿಯೂ ಹೌದು. ಇಂದಿಗೂ ಕೋಟೆ ಬಾಗಿಲು ಎಂದು ಕರೆಸಿಕೊಳ್ಳುತ್ತಿರುವ ಪ್ರದೇಶದಲ್ಲಿರುವ ಸಂಪೂರ್ಣ ಅವನತಿಯ ಹಾದಿಯಲ್ಲಿರುವ ಕೋಟೆಯು ನಿರ್ಮಾಣ ಆದದ್ದು ಕೆಳದಿ ಅರಸರ ಕಾಲದಲ್ಲಿ.... 'ಕೆಳದಿ ನೃಪ ವಿಜಯ'ದಲ್ಲಿಯೂ ಮೂಡುಬಿದಿರೆ ಕೋಟೆಯ ಪ್ರಸ್ತಾಪ ಬರುತ್ತದೆ ಎಂಬುದು ಗಮನಾರ್ಹ....

**ಶಾಸನಗಳು**

ಮೂಡುಬಿದಿರೆಯ ಇತಿಹಾಸ ಪುನಾರಚನೆಯ ಸಂದರ್ಭದಲ್ಲಿ ಇಲ್ಲಿಯ ಶಾಸನಗಳು ಅತ್ಯಂತ ಮಹತ್ವಪೂರ್ಣ ಪಾತ್ರವನ್ನು ವಹಿಸಿವೆ. ಇಲ್ಲಿ ಈತನಕ ಸುಮಾರು ೮೦ ರಷ್ಟು ಶಾಸನಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಸುಮಾರು ೩೨ ಶಿಲಾಶಾಸನಗಳು ಹಾಗೂ ೧೫ ತಾಮ್ರಶಾಸನಗಳನ್ನು ಭಾರತ ಸರ್ಕಾರದ ಶಾಸನಶಾಸ್ತ್ರ ಇಲಾಖೆಯವರು ಪ್ರಕಟಿಸಿದ್ದಾರೆ. ಈ ಶಾಸನಗಳನ್ನು ಅಧ್ಯಯನ ನಡೆಸಿದಾಗ ಮೂಡುಬಿದಿರೆಯ ವರ್ಣರಂಜಿತವಾದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಸಂಬಂಧಿ ವಲಯಗಳ ಪುನಾರಚನೆಯ ಸಂದರ್ಭದಲ್ಲಿ ಅತ್ಯಂತ ಮಹತ್ವಪೂರ್ಣವಾದ ದಾಖಲೆಗಳಾಗಿವೆ..... ಅಳುಪದೊರೆ ಪೃಥ್ವೀ ಸಾಗರನ (ಕಾಲ ಕ್ರಿ.ಶ. ೮೧೦-೮೪೦). ಕಾಲಕ್ಕೆ ಸೇರಿದ ಕಡಂದಲೆ ಶಾಸನ ಮೂಡುಬಿದಿರೆ ಸೀಮೆಯಲ್ಲಿ ದೊರೆಯುವ ಅತ್ಯಂತ ಪ್ರಾಚೀನ ಶಾಸನ. ಈ ಶಾಸನದಲ್ಲಿ ಹಿರಿಯ ಅಧಿಕಾರಿ ಸಿರಿ ಎರೆ ಬೊಯ್ಗವರ್ಮರಸನು ಕುಂದಪ್ಪಳ ಭಟಾರ (ಕಡಂದಲೆ ಸುಬ್ರಮಣ್ಯ) ದೇವರಿಗೆ ಪಾರಿವಾಳಿ ಎಂಬ ಕ್ಷೇತ್ರವನ್ನು ದಾನ ಮಾಡಿದ ವಿಚಾರ ತಿಳಿಸುತ್ತದೆ. ನಂತರ ಸುಮಾರು ೪೦೦ ವರ್ಷಗಳ ನಂತರ ದೊರೆತಿರುವ ಶಾಸನವೆ ಮೂಡುಬಿದಿರೆ ನೆಲದಲ್ಲಿನ ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ. ಸುಮ. ೧೧೯೦-೧೨೨೦ರ ಅವಧಿಯ ಒಂದನೆಯ ಕುಲಶೇಖರನ ಮೂರು ಶಾಸನಗಳು ಕ್ರಿ.ಶ. ೧೨೦೫ರ ಸುಮಾರಿಗೆ ಮೂಡುಬಿದಿರೆಯ ಅತ್ಯಂತ ಪ್ರಾಚೀನ ಶಕ್ತಿಕೇಂದ್ರವಾಗಿದ್ದ ಗೌರಿ ದೇವಾಲಯದಲ್ಲಿ ಕಂಡುಬರುತ್ತದೆ. ಇದೇ ಅರಸನ ಕ್ರಿ.ಶ. ೧೨೧೫ರ ಸುಮಾರಿನ ಸೆಟ್ಟರ ಬಸದಿಯಲ್ಲಿ ದೊರೆಕಿರುವ ಶಿಲಾ ಶಾಸನವು ಮೂಡುಬಿದಿರೆಯಲ್ಲಿ ಜೈನಧರ್ಮದ ಅಸ್ತಿತ್ವವನ್ನು ತಿಳಿಸುವ ಅತ್ಯಂತ ಪ್ರಾಚೀನ ಶಾಸನ. ಕ್ರಿ.ಶ. ೧೨೮೫ರ ಶಾಸನವು ಬಮ್ಮದೇವಾಳ್ವೇಂದ್ರ ದೇವನ ಆಳ್ವಿಕೆಯ ವಿಚಾರವನ್ನು ತಿಳಿಸುತ್ತದೆ. ಸುಮಾರು ೧೩೮೫ರ ಶಾಸನ ಒಂದರಲ್ಲಿ ಮುಮ್ಮಡಿ ಕುಲಶೇಖರನ ವಿವರಗಳು ತಿಳಿಯುತ್ತದೆ. "ಸಮಸ್ತ ಭುವನ ವಿಖ್ಯಾತ ಪಾಂಡ್ಯ ಮಹಾರಾಜಾಧಿರಾಜ ಪರಮೇಶ್ವರ ಮತ್ತು ಪರಮಭಟ್ಟಾರಕ ಎಂಬ ಸಾರ್ವಭೌಮ ಸೂಚಕ ಬಿರುದುಗಳನ್ನು ಮುಮ್ಮಡಿ ಕುಲಶೇಖರನಿಗೆ ನೀಡಲಾಗಿದೆ. ಕ್ರಿ.ಶ. ೧೩೯೬ರ ಸುಮಾರಿಗೆ ದೊರೆತಿರುವ ಶಾಸನ ಅಳುಪರ ಕೊನೆಯ ರಾಜ ಇಮ್ಮಡಿ ವೀರಪಾಂಡ್ಯರಿಗೆ ಸೇರಿದ್ದು. ಗುರು ಬಸದಿಯ ಪ್ರಾಚೀನತೆಗೆ ಸಂಬಂಧಿಸಿದಂತೆ ಕ್ರಿ.ಶ. ೧೩೪೨ರಲ್ಲಿ ದೊರೆತಿರುವ ಶಾಸನವೇ ಅತ್ಯಂತ ಪ್ರಾಚೀನವಾದದ್ದು. ಕ್ರಿ.ಶ. ೧೪೦೬ರ ಶಾಸನವು ವಿಜಯನಗರದರಸ ಬುಕ್ಕರಾಯನ ಆಳ್ವಿಕೆಯಲ್ಲಿ ಗುರುಗಳ ಬಸದಿಯ ಚಂಡೋಗ್ರ ಪಾರ್ಶ್ವನಾಥರ ಶ್ರೀ ಕಾರ್ಯಕ್ಕೆ ದಾನ ಮಾಡಿದ ಭೂಮಿಗಳ ವಿವರವನ್ನು ನೀಡುತ್ತದೆ. ಗುರುಬಸದಿ ಒಂದರಲ್ಲಿಯೇ ೫ ಶಾಸನಗಳು ಕಂಡುಬಂದರೆ, ಮೂಡುಬಿದರೆಯ ಮುಕುಟಪ್ರಾಯವಾಗಿರುವ ತ್ರಿಭುವನ ತಿಲಕ ಚೂಡಾಮಣಿ ಬಸದಿಯಲ್ಲಿ ಸುಮಾರು ೧೩ ಶಾಸನಗಳು ಕಂಡುಬರುತ್ತದೆ. ಇಲ್ಲಿ ಮಂದಿರದ ವಿವಿಧ ಹಂತಗಳ ನಿರ್ಮಾಣದ ಬಗ್ಗೆ ಅತ್ಯಪೂರ್ವ ಸಾಕ್ಷಿಗಳಾಗಿವೆ. ಮೂಡುಬಿದಿರೆಯ ಜೈನ ಪೇಟೆಯ ಚಿಟಕೇರಿ ರಸ್ತೆಯ ಕೊನೆಯಲ್ಲಿರುವ ಕ್ರಿ.ಶ. ೧೫೬೮ರ ಎರಡು ಶಿಲಾ ಶಾಸನಗಳು ಆ ಕಾಲದ ಮೂಡುಬಿದಿರೆ ನಗರದ ಗಡಿಗಳನ್ನು ಗುರ್ತಿಸಲು ಸಹಕಾರಿ ಆಗಿದೆ. ಮೂಡುಬಿದಿರೆಯಲ್ಲಿ ಕಂಡುಬರುವ ಬಹುತೇಕ ಶಾಸನಗಳು ಜೈನ ಶಾಸನಗಳು. ಇವು ಮೂಡುಬಿದಿರೆಯಲ್ಲಿ ಜೈನಧರ್ಮದ ಉನ್ನತಿ ಹಾಗೂ ಜೈನ ಸಂಸ್ಕೃತಿಯ ಕುರುಹನ್ನು ಕುರಿತಂತೆ ಅತ್ಯಂತ ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ.

**ಸಾಹಿತ್ಯದ ಕನ್ನಡಿಯಲ್ಲಿ**

ಮೂಡುಬಿದಿರೆಯ ಸಾಹಿತ್ಯದ ಚರಿತ್ರೆ ಕನ್ನಡ ಸಾಹಿತ್ಯ ಹಾಗೂ ದಾಖಲೆಗಳ ಸಂದರ್ಭದಲ್ಲಿ ಅತ್ಯಂತ ಮಹತ್ವವಾದ ಸ್ಥಾನವನ್ನು ಪಡೆದುಕೊಂಡಿವೆ. ಸಾಹಿತ್ಯದ 'ಓಂ' ಕಾರವು ಇಲ್ಲಿ ಶಾಸನಗಳ ರೂಪದಲ್ಲಿ ಕಾಣಿಸಿಕೊಂಡರೂ ಮೂಡುಬಿದಿರೆಯ ಸಾಹಿತ್ಯ ವಲಯದ

ಸಾಧನೆ ಬೆರಗು ಹುಟ್ಟಿಸುವಂತಹುದು. ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನ ಎಂದರೆ ಒಂದರ್ಥದಲ್ಲಿ ಜೈನ ಸಾಹಿತ್ಯ ಅಧ್ಯಯನವೆ. ಜೈನಧರ್ಮ ಮತ್ತು ಸಂಸ್ಕೃತಿಯು ಕನ್ನಡ ಸಾಹಿತ್ಯ ವಾಹಿನಿಯ ಮೇಲೆ ಬೀರಿರುವ ಪ್ರಭಾವ ಬಹು ಎತ್ತರದ ಮಟ್ಟದ್ದು. ಈ ಮಾತು ಮೂಡುಬಿದಿರೆ ಮಟ್ಟಿಗಂತೂ ಸಂಪೂರ್ಣ ಅನ್ವಯಿಸುತ್ತದೆ. ಅತ್ಯಂತ ಪ್ರಾಚೀನ ಕವಿಯಾದ ಸೋಮನಾಥನನ್ನು ಹೊರತುಪಡಿಸಿ ಮೂಡುಬಿದಿರೆಯ ಎಲ್ಲ ಪ್ರಾಚೀನ ಕವಿಗಳು ಜೈನರೆ ಆಗಿದ್ದವರು. ಅಲ್ಲದೆ ಮತ್ತೊಂದು ವಿಶೇಷವೇನೆಂದರೆ ಇಲ್ಲಿನ ಬಹುತೇಕ ಕವಿಗಳು ಸಾಂಗತ್ಯವನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ. ಶಾಸನದ ಕವಿಗಳು ಗದ್ಯವನ್ನು ಕಂದ ಹಾಗೂ ವೃತ್ತಗಳ ಮಿಶ್ರಣದಲ್ಲಿ ಬಳಸಿದ್ದಾರೆ. ಸೋಮನಾಥನು ಛಂದಸ್ಸಿನಲ್ಲಿ ವೈವಿಧ್ಯತೆ ಮೆರೆದವನು. ಆದರೆ ರತ್ನಾಕರನ ಭರತೇಶ ವೈಭವದ ಜನಪ್ರಿಯತೆಯೊಂದಿಗೆ ಸಾಂಗತ್ಯದ ಪ್ರಭಾವ ದಟ್ಟವಾಯಿತು. ನಂತರದ ಬಹುತೇಕ ಕವಿಗಳು ಸಾಂಗತ್ಯವನ್ನು ಆಶ್ರಯಿಸಲು ಇದೆ ಕಾರಣವಾಯಿತು. ಮಧ್ಯಯುಗದ ಸಾಹಿತ್ಯವು ಸಹಜವಾಗಿಯೆ ಜೈನ ಧರ್ಮದ ತೀರ್ಥಂಕರರ, ಕೇವಲಿಗಳ, ಯಕ್ಷ-ಯಕ್ಷಿಯರು, ಪುರಾಣಗಳು ಹೀಗೆ ಕಥಾ ಹಂದರವನ್ನು ಒಳಗೊಂಡಿದ್ದವು.

**ಸೋಮನಾಥ**

ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಪ್ರಾಚೀನ ಕಾವ್ಯ 'ಉದ್ಭಟ್ಟ' ರಚಿತವಾದದ್ದು ಮೂಡುಬಿದಿರೆಯಲ್ಲಿಯೇ. ಇದನ್ನು ರಚಿಸಿದಾತ ಚೌಟ ಅರಸುಮನೆತನಕ್ಕೆ ಸೇರಿದವನಾದ ಸೋಮರಾಜ-ಕೃತಿ ರಚಿತವಾದದ್ದು ೧೨೨೨ರಲ್ಲಿ. ಸೋಮ ರಾಜನು ಶೈವ ಧರ್ಮಾಚರಣೆಯವನು. ತನ್ನ ಗುರು ಶೈವ ಸಂಪ್ರದಾಯದ ಬಹು ಪ್ರಖ್ಯಾತನಾದ ಅಲ್ಲಮಪ್ರಭು ಎಂದು ಹೇಳಿಕೊಂಡಿದ್ದಾನೆ. ಈತನಿಗೆ ಪರಮಜ್ಞಾನಿ, ವರವಾಣಿ ಎಂಬ ಎರಡು ಬಿರುದುಗಳು ಇದ್ದಂತೆ ತಿಳಿದುಬರುತ್ತದೆ. ಈ ಕೃತಿ ಚಂಪೂ ಶೈಲಿಯಲ್ಲಿದ್ದರೂ ಗದ್ಯ ಬಹಳ ವಿರಳವಾಗಿದೆ. ತನ್ನ ಕಾವ್ಯವನ್ನು 'ಶೃಂಗಾರ ಸಾರಂ' ಎಂದು ಸೋಮನಾಥ ಹೇಳಿಕೊಂಡಿದ್ದಾನೆ. ಪ್ರಖ್ಯಾತನಾದ ಹರಿಹರನೆ ಮೊದಲಾದ ಪ್ರಾಚೀನ ಕವಿಗಳ ಕಥಾಬಿತ್ತಿ ಸೋಮರಾಜನಿಗೆ ಮಾದರಿಯಾಗಿದ್ದರು. ಕಥಾ ವಸ್ತುವಿನಲ್ಲಿ ಸಾಕಷ್ಟು ಸ್ವಾತಂತ್ರ್ಯ ವಹಿಸಿದ್ದಾನೆ. ಹೊಸ ಹೊಸ ಕಲ್ಪನೆಗಳನ್ನು ಹೆಣೆದಿದ್ದಾನೆ. ಹಲವಾರು ಕತೆಗಳು ವಿಚಾರ ಪ್ರಚೋದಕ ಉಪಕತೆಗಳೂ ಅಡಕವಾಗಿ ಮೇಲ್ನೋಟಕ್ಕೆ ಶಿವಭಕ್ತರ ಭಕ್ತಿ ಕಥಾ ಸಂಕಲನದಂತೆ ಈ ಕಾವ್ಯ ತೋರುತ್ತದೆ. ಆದರೆ ಕಥಾ ಓಟದ ರಭಸವು ಬೆರಗು ಹುಟ್ಟಿಸುವ ರೀತಿಯಲ್ಲಿದೆ.

**ದೇವರಸೆ**

ಇತಿಹಾಸ ಪ್ರಸಿದ್ಧ ತ್ರಿಭುವನ ತಿಲಕ ಚೂಡಾಮಣಿ ಬಸದಿಯ ಚಂದ್ರನಾಥ ಸ್ವಾಮಿಯ ಹೊಸ ಬಸ್ತಿಯ ಗದ್ದಿಗೆ ಮಂಟಪದ ಉತ್ತರ ಭಾಗದ ಗೋಡೆಯಲ್ಲಿರುವ ಶಾಸನವನ್ನು ಬರೆದ ಕವಿ ಈತ. ದೇವರಸನು ರಚಿಸಿದ ಸ್ವತಂತ್ರವಾದ ಕೃತಿಗಳು ಯಾವುವೂ ದೊರೆಕಿಲ್ಲ. ಆದರೆ ಈ ಶಾಸನದ ಕಾವ್ಯಾತ್ಮಕ ಶೈಲಿಯನ್ನು ಗಮನಿಸಿದರೆ ದೇವರಸನ ಕಾವ್ಯಸಾಮರ್ಥ್ಯಕ್ಕೆ ಪುರಾವೆ ದೊರೆಯುತ್ತದೆ.

**ವಿದ್ಯಾನಂದ**

ಈತನಿಂದ ರಚಿತವಾದ 'ಕಾವ್ಯಸಾರ' ಒಂದು ಅಪೂರ್ವವಾದ ಕೃತಿ-ಕಾವ್ಯಸಾರ ಹೆಸರೆ ಸೂಚಿಸುವಂತೆ 'ಕಾವ್ಯದ ಆತ್ಮದ' ವಿವರಣೆ ನೀಡುವ ಕೃತಿ. ಕಾವ್ಯರಚನೆಯಲ್ಲಿ ಅನುಸರಿಸಬೇಕಾದ ನಿಯಮ ಶ್ರೇಷ್ಠ ಕಾವ್ಯದ ಲಕ್ಷಣ-ಇವುಗಳ ವಿವರಣೆ ಈ ಕೃತಿಯಲ್ಲಿ ಕಂಡುಬರುತ್ತದೆ. ಪ್ರತಿಯೊಂದು ಲಕ್ಷಣ, ನಿಯಮಗಳ ವಿವರಣೆಗಾಗಿ ವಿದ್ಯಾನಂದನು ಪ್ರಾಚೀನ ಕಾವ್ಯಗಳ ಉದಾಹರಣೆಯನ್ನು ಕೊಡುತ್ತಾನೆ. ಹಾಗಾಗಿ ಇದು ಇನ್ನೊಂದು ರೀತಿಯಲ್ಲಿ ಪ್ರಾಚೀನ ಕೃತಿಗಳ ಮಹತ್ವದ ವಿವರಗಳ ಒಂದು ಸಂಕಲನದಂತೆಯೂ ಭಾಸವಾಗುತ್ತದೆ. ಪ್ರಾಚೀನ ಕವಿಗಳಾದ ಕಮಲಭವ, ಗುಣವರ್ಮ, ಮಧುರ, ಚಂದ್ರಶೇಖರ,- ಇವರುಗಳ ಪ್ರಸ್ತಾಪ ಬರುತ್ತದೆ. ಕಾವ್ಯಸಾರದಲ್ಲಿ ಒಟ್ಟು ೪೫ ಅಧ್ಯಾಯಗಳು, ೧೧೪೩ ಪದ್ಯಗಳಿದ್ದು, ಕನ್ನಡ ಸಾಹಿತ್ಯ ಚರಿತ್ರೆಯ ಪುನಾರಚನೆಯ ಸಂದರ್ಭದಲ್ಲಿ ಗಮನಿಸಲೇಬೇಕಾದ ಒಂದು ಕೃತಿಯಾಗಿದೆ.

**ರತ್ನಾಕರ**

ರತ್ನಾಕರನ ಹೆಸರನ್ನು ಕೇಳ್ದರಿಯದ ಕನ್ನಡ ಸಾಹಿತ್ಯಾಸ್ತಕರು ಇರಲು ಬಹುಷಃ ಅಸಾಧ್ಯ. ಕರ್ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಮೂಡುಬಿದಿರೆ ಹೆಸರನ್ನು ಚಿರಸ್ಥಾಯಿಗೊಳಿಸಿ, ಅದಕ್ಕೊಂದು ವಿಶಿಷ್ಟ ಸ್ಥಾನವನ್ನು ಒದಗಿಸಿಕೊಡುವಲ್ಲಿ ರತ್ನಾಕರನ ಸಾಧನೆ ಅತ್ಯಂತ ಅಪೂರ್ವವಾದದ್ದು. ಕನ್ನಡ ಸಾಹಿತ್ಯದ ಮೇರುಕೃತಿಗಳಲ್ಲಿ ಒಂದೆಂದು ಮಾನ್ಯವಾದ ಭರತೇಶ ವೈಭವ ರಚಿತವಾದದ್ದು. ತನ್ಮೂಲಕ ಸಾಹಿತ್ಯ ಚರಿತ್ರೆಯಲ್ಲಿ ರತ್ನಾಕರನ ಹೆಸರು ಚಿರಸ್ಥಾಯಿಯಾದದ್ದು ಕನ್ನಡಿಗರ ಪುಣ್ಯವೆಂದೆನ್ನಬಹುದು. ರತ್ನಾಕರವರ್ಣಿಗೆ ರತ್ನಾಕರ ಸಿದ್ಧ, ರತ್ನಾಕರ ಅಣ್ಣ ಎಂಬ ಪರ್ಯಾಯ ಹೆಸರುಗಳೂ ಇದ್ದವು. ಶೃಂಗಾರ ಕವಿ ಹಂಸರಾಜ, ನಿರಂಜನ ಸಿದ್ಧ ಎಂಬ ಬಿರುದುಗಳೂ ಇದ್ದವು. ತಾನು ಕ್ಷತ್ರಿಯ ವಂಶದವನೆಂದೂ, ಶ್ರೀಮಂದರ ಸ್ವಾಮಿ 'ನನ್ನ ಅಯ್ಯ' ಎಂದೂ ಹೇಳಿಕೊಂಡಿದ್ದಾನೆ. ದೀಕ್ಷಾಗುರು ಚಾರುಕೀರ್ತಿಗಳೆಂದರೆ, ಮೋಕ್ಷಗುರು ಹಂಸನಾಥ ಎಂದೂ, ಹಂಸನಾಥನ ಆಜ್ಞಾನುಸಾರ ಭರತೇಶ ವೈಭವವನ್ನು ರಚಿಸಿದನೆಂದೂ ಕವಿಯ ಹೇಳಿಕೆ. ಒಂದರ್ಥದಲ್ಲಿ ಜೈನ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಜನಪ್ರಿಯವಾದರೂ, ಅಷ್ಟೇ ವಿವಾದಾಸ್ಪದ ಕೃತಿಯಾದ ಭರತೇಶ ವೈಭವದ ಕರ್ತೃ ರತ್ನಾಕರನ ಬದುಕೂ ದಂತಕತೆಗಳಿಗೆ ಆಹಾರವಾಗಿದೆ. ಇದಕ್ಕೆ ಬಹುಷಃ ಬದುಕನ್ನು ಅತ್ಯಂತ ಗಾಢವಾಗಿ ಪ್ರೀತಿಸುತ್ತಿದ್ದ ರತ್ನಾಕರನ ಖಾಸಗಿ ಬದುಕು ಕಾರಣ ಎಂದೆನ್ನಬಹುದೇನೋ. ಒಂದು ರೀತಿಯ ಅಸಂಪ್ರದಾಯಕವಾದ ಆಲೋಚನಾ ಕ್ರಮ ಆತನ ಮನಸ್ಸಿನ ಮೇಲೆ ಕ್ಲೇಶದಾಯಕ ಪರಿಣಾಮವನ್ನು ಬೀರಿರುವ ಸಾಧ್ಯತೆ ಇದೆ. ಹಾಗಾಗಿಯೆ ತನ್ನ ಬದುಕಿನ ಅತ್ಯಂತ ಮಹತ್ವದ ಸಂದರ್ಭವೊಂದರಲ್ಲಿ ಮತಾಂತರಗೊಂಡು ವೀರಶೈವ ಧರ್ಮ ಸ್ವೀಕರಿಸಿದ ಹಾಗೆ ತೋರುತ್ತದೆ. ಆವೇಶದ ಭಾವ ಸಡಿಲವಾಗುತ್ತ, ಮನಸ್ಸಿನಲ್ಲಿ ಸಮಾಧಾನ ಭಾವ ಜಾಗೃತಗೊಂಡಾಗ, ತನ್ನ ಕ್ರಿಯೆಯ ಬಗ್ಗೆ ಪಶ್ಚಾತ್ತಾಪ ಪಟ್ಟು ಪುನಃ ತನ್ನ ಮೂಲ ನೆಲೆಗೆ ಹಿಂತಿರುಗಿದನೆಂಬ ವಿಚಾರವು ರತ್ನಾಕರನ ನಿರಂತರ ಅನ್ವೇಷಣಾ ಬುದ್ಧಿಗೂ ಸೂಚಕವಾಗಿದೆ. ಅತ್ಯಂತ ಸಂವೇದನಾ ಶೀಲನಾದ ರತ್ನಾಕರನ ಭಾವತೀವ್ರತೆಯ ಪ್ರವೃತ್ತಿಯನ್ನು ಆತನ ಭರತೇಶ ವೈಭವದಂತೆಯೆ ಉಳಿದ ಕೃತಿಗಳಲ್ಲಿಯೂ ಕಾಣಬಹುದು. ರತ್ನಾಕರ ರಚಿಸಿದ ಕೃತಿಗಳು :

೧. ಭರತೇಶ ವೈಭವ → ೮೦ ಸಂಧಿಗಳು → ೯೯೬೯ ಸಾಗಂತ್ಯ ಪದ್ಯಗಳು.
೨. ತ್ರಿಲೋಕ ಶತಕ → ೧೨೭ ಕಂದ ಪದ್ಯಗಳು + ೧ ವೃತ್ತ.
೩. ಅಪರಾಜಿತೇಶ್ವರ → ಶತಕ ೧೨೮ ವೃತ್ತಗಳು.
೪. ರತ್ನಾಕರ ಶತಕ → ೧೨೭ ವೃತ್ತ + ೧ ಕಂದ.
೫. ಸೋಮೇಶ್ವರ ಶತಕ. (?)
೬. ಅಣ್ಣನ ಪದಗಳು – ಸುಮಾರು ೨೦೦೦ ಗೀತೆಗಳು.

-ಸೋಮೇಶ್ವರ ಶತಕದ ಕರ್ತೃತ್ವ ಕುರಿತಂತೆ ಸಾಕಷ್ಟು ವಿವಾದಗಳಿವೆ. ರತ್ನಾಕರನು ತನ್ನ ಬದುಕಿನ ಕಠಿಣ ಕಾಲದಲ್ಲಿ ಜೈನ ಸಮಾಜ ಹಾಗೂ ಧರ್ಮದ ಬಗ್ಗೆ ಜಿಗುಪ್ಸಿತನಾಗಿ ವೀರಶೈವ ಧರ್ಮ ಸ್ವೀಕರಿಸಿದ ಸಂದರ್ಭದಲ್ಲಿ 'ಸೋಮೇಶ್ವರ ಶತಕ' ರಚಿಸಿದ್ದಾನೆ ಎಂಬ ವಾದವು ಇದೆ. ಕಾಲಾನುಕ್ರಮದಲ್ಲಿ ಮನಸ್ಸು ತಿಳಿಯಾದ ನಂತರ ಸ್ವ-ಧರ್ಮಕ್ಕೆ ಹಿಂತಿರುಗಿದ ರತ್ನಾಕರ, ಈ ಹಿಂದೆ ತಾನು ವೀರಶೈವ ಧರ್ಮ ಸ್ವೀಕರಿಸಿದ ಬಗ್ಗೆ ಪಶ್ಚಾತ್ತಾಪವನ್ನು ತನ್ನ ಹಾಡುಗಳಲ್ಲಿ ವ್ಯಕ್ತ ಪಡಿಸುತ್ತಾನೆ.

ಕರ್ಮವೇ ಬಲ್ಲಿತಲ್ಲ ಜಿನ
ಧರ್ಮವನುಳಿದೆನ್ನನೀಪರಿ ಹುಚ್ಚು ಮಾಡಿತಲ್ಲ ||
ಕರ್ಮವಶದಿ ಕಾರ್ಗತ್ತಲೆ ಕವಿದೆನ್ನ |
ಚರ್ಮಕ್ಕೆ ಅಂಗವು ಬಿತ್ತಲ್ಲ ನಿರ್ಮಲ ಶ್ರೀ ಜಿನಧರ್ಮದೊಳಿದ್ದೆನ್ನ
ಈ ಮೈ ಹುಚ್ಚು ಮಾಡಿತಲ್ಲ ||

-ಅತ್ಯಂತ ಸಂವೇದನಾಶೀಲನಾದ ರತ್ನಾಕರ ಕವಿ ಸ್ವಾತಂತ್ರ್ಯವನ್ನು ಬಳಸಿಕೊಂಡು ಭರತೇಶ ವೈಭವ ರಚಸಿದ ಸಂದರ್ಭದಲ್ಲಿ ಗುರುಪೀಠ ಹಾಗೂ ಶ್ರಾವಕವರ್ಗದ ಕೋಪಕ್ಕೆ ಗುರಿಯಾಗಿ ಯಾತನೆ ಅನುಭವಿಸಿದ. ಕ್ಷಣಕಾಲದ ಆವೇಶ ಮತಾಂತರಕ್ಕೆ, ಕಾರಣವಾಗಿದ್ದಿರಬಹುದಾದರೂ, ಆತನ ಚಿಂತನೆಗೆಳೆಲ್ಲವೂ ಗಾಢವಾದ ಜಿನಧರ್ಮ ಶ್ರದ್ಧೆಯಿಂದ ರೂಪಿತವಾದುದಾಗಿತ್ತು. ಆದುದರಿಂದಲೆ ತನ್ನ ಶತಕಗಳಲ್ಲಿ ಭವ ಬದುಕಿನ ನಿಸ್ಸಾರತೆಯನ್ನು, ಆತ್ಮಜ್ಞಾನದ ಬಯಕೆಯನ್ನು ತೋರ್ಪಡಿಸುತ್ತಾನೆ. ಆತನ ಶತಕಗಳು ಜೈನ ಸಿದ್ಧಾಂತದ ಸಾರವನ್ನು ಒಳಗೊಂಡಿದೆ ಎಂದೆನ್ನಲು ಅಡ್ಡಿಯಿಲ್ಲ. ಭರತೇಶ ವೈಭವ ಬಹು ಚರ್ಚಿತವಾಗಿರುವ ಕೃತಿ ಆಗಿರುವುದರಿಂದಲೂ, ಈ ಬರಹದ ಮಿತಿಯ ಒಳಗೆ ಅದರ ಬಗ್ಗೆ ಚರ್ಚಿಸಲು ಹೋಗಿಲ್ಲ. ಆದರೆ, ಸಾಂಗತ್ಯ ಸ್ವರೂಪದ ಗೌರೀಶಂಕರ ಆಗಿರುವ ಭರತೇಶ ವೈಭವ ಕನ್ನಡ ಸಾಹಿತ್ಯದ ಅಪೂರ್ವ ಕೃತಿಗಳಲ್ಲಿ ಒಂದು, ಎಂಬುದರ ಬಗ್ಗೆ ಬಹುಷಃ ಭಿನ್ನಾಭಿಪ್ರಾಯ ಇರಲಾರದೆಂದು ಭಾವಿಸುತ್ತೇನೆ.

**ನೇಮಿವ್ರತಿ : (ಕ್ರಿ.ಶ. ೧೫೬೦)**

ಮೂಡುಬಿದಿರೆಯಲ್ಲಿಯೆ ಹುಟ್ಟಿ ಬೆಳೆದ ಈ ಕವಿಯ ಹೆಸರೇ ಸೂಚಿಸುವಂತೆ ಜಿನ ಮುನಿಯಾಗಿದ್ದವನು. ಈತ ರಚಿಸಿರುವ 'ಜ್ಞಾನ ಭಾಸ್ಕರ ಚರಿತ್ರೆ' ಮಹತ್ವದ ಕೃತಿಗಳಲ್ಲಿ ಒಂದು. ೧೩೩ ಸಾಂಗತ್ಯ ಪದ್ಯಗಳಲ್ಲಿ ರಚಿತವಾಗಿರುವ ಈ ಕೃತಿಯು ಜೀವನ್ಮುಕ್ತಿಗೆ ಅವಶ್ಯಕವಾದ, ಆಧ್ಯಾತ್ಮಿಕ ಸಾಧನೆ, ಸ್ವಾಧ್ಯಾಯ, ಧ್ಯಾನ, ಮುಂತಾದ ವಿಚಾರಗಳನ್ನು ತಿಳಿಸುತ್ತದೆ. "ತನುವೆಂಬ ಕೆಸರೊಳು ಲೋಕವ ಬೆಳಗುವ/ಚಿನ್ಮಯ ರತ್ನವುಂಟದನು ತನುವ ಬತ್ತಿಸಿಯೂ ರತ್ನವ" ಮೇಲಕೆತ್ತಿ ಬೇಕೆನ್ನುತ್ತಾನೆ. ಆತ್ಮನಲ್ಲಿ ಅಪಾರವಾದ ಶಕ್ತಿ ಅಡಗಿದೆ. ಅದನ್ನು ಬೆಳಗಿಸಬೇಕು. ಇಲ್ಲದಿದ್ದರೆ ಅದು ನಿರುಪಯುಕ್ತ ಆಗುತ್ತದೆ ಎಂದೆನ್ನುತ್ತಾನೆ. ಎಲ್ಲ ಜ್ಞಾನಕ್ಕಿಂತ ಆತ್ಮ ಜ್ಞಾನವೆ ಶ್ರೇಷ್ಠ, ಅದನ್ನು ಮೀರಿದ್ದು ಮತ್ತೊಂದಿಲ್ಲ.

"ವ್ರತಗುಣಶೀಲ ತಪಸು ಶಾಸ್ತ್ರಗಳೆಲ್ಲ
ಕ್ಷಿತಿಯೊಳು ಸೊನ್ನೆಗಳಂತೆ
ಅತಿಶಯದಾತ್ಮ ಭಾವನೆ ಲೆಕ್ಕದಂತೆಯೆಂ
ದತಿ ಸುಜ್ಞಾನಿಗಳು ಪೇಳುವರು"

-'ಸು-ವಿಚಾರ ಚರಿತ್ರೆ' ನೇಮಿವ್ರತಿಯ ಮತ್ತೊಂದು ಮಹತ್ವದ ಕೃತಿ. ಗುಣ-ಗಾತ್ರ ಎರಡರಲ್ಲೂ ಇದು ಹಿರಿದಾದುದು. ಒಟ್ಟು ೧೦ ಸಂಧಿಗಳಿಂದಲೂ ೧೧೨೯ ಸಾಂಗತ್ಯ ಪದ್ಯಗಳಿಂದಲೂ ರಚಿತವಾಗಿರುವ ಈ ಕೃತಿಯ ವಸ್ತು ಜೈನ ಸಿದ್ಧಾಂತವೆ ಆಗಿದೆ. ಸಂಸಾರ ಸಮುದ್ರದಲ್ಲಿ ಸಿಲುಕಿರುವ ಆತ್ಮನು ಅನುಭವಿಸುವ ಘೋರವಾದ ನೋವು, ಇದರಿಂದ ಬಿಡುಗಡೆ ಪಡೆದು ಮುಕ್ತಿಯ ಶಾಶ್ವತ ಸುಖವನ್ನು ಹೊಂದಬೇಕೆನ್ನುವ ಆಶಯವನ್ನು ಈ ಕೃತಿ ವ್ಯಕ್ತಪಡಿಸುತ್ತದೆ.

**ಚಂದ್ರಮ : (ಸು.ಕ್ರಿ.ಶ. ೧೬೫೦)**

ಲೋಕಸ್ವರೂಪ, ಗಣಿತ ವಿಲಾಸ ಎಂಬ ಕೃತಿಗಳನ್ನು ರಚಿಸಿರುವ ಚಂದ್ರಮ ಮೂಡುಬಿದಿರೆಯ ಸಮೀಪದ ಅಳಿಯೂರಿನವನು. ಜೈನ ಸಿದ್ಧಾಂತದ ಹಿನ್ನೆಲೆಯಲ್ಲಿ ಲೋಕಾಕಾರದ ವರ್ಣನೆ, ಆದಿ-ಮಧ್ಯಮ-ಊರ್ಧ್ವ ಲೋಕಗಳ ವರ್ಣನೆ 'ಲೋಕ ಸ್ವರೂಪ' 'ಕೃತಿಯ ವಸ್ತು. ೧೪೦ ಕಂದ ಪದ್ಯಗಳಿಂದ ರಚಿತವಾಗಿರುವ 'ಲೋಕ ಸ್ವರೂಪ' ಅಪ್ರಕಟಿತ ಕೃತಿ. ಚಂದ್ರಮನ ಮತ್ತೊಂದು ಕೃತಿಯಾದ 'ಗಣಿತ ವಿಲಾಸ'ವೂ ಬಹಳಷ್ಟು ಜೀರ್ಣಗೊಂಡಿರುವ ತಾಡಪತ್ರಗಳಲ್ಲಿ ದೊರೆಯುತ್ತದೆ. ಬಹಳ ಜೀರ್ಣವಾಗಿರುವುದರಿಂದ ಇಲ್ಲಿರುವ ಪದ್ಯದ ಸಂಖ್ಯೆಯನ್ನು ನಿಖರವಾಗಿ ಹೇಳುವುದು ಕಷ್ಟ. ನಾಲ್ಕು ಅಧ್ಯಾಯಗಳಿಂದ ಸುಮಾರು ೬೨೦ ಕಂದಗಳನ್ನು ಗುರ್ತಿಸಬಹುದು. ತನ್ನೆರಡೂ ಕೃತಿಗಳನ್ನು ಚಂದ್ರಮನು ಕಂದದಲ್ಲಿಯೆ ಬರೆದಿರುವುದು ಗಮನಾರ್ಹ.

**ಶಾಂತಕೀರ್ತಿ : (ಸು. ಕ್ರಿ.ಶ. ೧೭೨೫)**

-ಮೂಡುಬಿದಿರೆಯ ಸಾಹಿತ್ಯ ಇತಿಹಾಸದಲ್ಲಿ ರತ್ನಾಕರನನ್ನು ಬಿಟ್ಟರೆ, ಅತ್ಯಂತ ಮಹತ್ವದ ಕವಿ ಈತ. ಶಾಂತಕೀರ್ತಿ ರಚಿಸಿದ ಕೃತಿಗಳು.

೧. ಚತುರ್ವಿಂಶತಿ ತೀರ್ಥಂಕರ ಪುರಾಣ : ಕ್ರಿ.ಶ. ೧೭೨೫.
೨. ಶಾಂತೀಶ್ವರ ಚರಿತೆ : ಕ್ರಿ.ಶ. ೧೭೩೨.
೩. ಪಾರ್ಶ್ವನಾಥ ಚರಿತೆ : ಕ್ರಿ.ಶ. ೧೭೩೩.
೪. ಪುರುದೇವ ಚರಿತೆ : ಕ್ರಿ.ಶ. ೧೭೩೫.
೫. ಷೋಡಶ ಭಾವನಾ ಚರಿತೆ : ಕ್ರಿ.ಶ. ೧೭೪೭.
೬. ಪಟ್ಟಾಭೃತ ವ್ಯಾಖ್ಯಾನ -(ಶ್ರೀ ಕುಂದಕುಂದಾಚಾರ್ಯರ ಪ್ರಕೃತ ಮೂಲ ಕೃತಿ 'ಪಟ್ಟಾಭೃತ' ಇದರ ಕನ್ನಡ ವ್ಯಾಖ್ಯಾನ) -ಕ್ರಿ.ಶ. ೧೭೪೬.
೭. ಆರಾಧನಾ ಸಾರ : ದೇವಸೇನನ ಸಂಸ್ಕೃತ 'ಆರಾಧನಾ ಸಾರ' ಇದರ ಕನ್ನಡ ವ್ಯಾಖ್ಯಾನ-ಕ್ರಿ.ಶ. ೧೭೫೫.
೮. ದ್ವಾದಶಾನುಪ್ರೇಕ್ಷೆ. (ಹಸ್ತಪ್ರತಿ ದೊರಕಿಲ್ಲ.)
೯. ಭುಜಬಲಿ ಚರಿತೆ (ವಿವರ ದೊರಕಿಲ್ಲ.)

– ಶಾಂತಕೀರ್ತಿಯ ಎಲ್ಲ ಕಾವ್ಯಗಳು ಸಾಮಾನ್ಯ ಗುಣಸಂಗ್ರಹಶೀಲತೆ. ಎಲ್ಲಿಯೂ ಅನಗತ್ಯ ವರ್ಣನೆಗಳಿಲ್ಲ. ಓದುಗನ ದೃಷ್ಟಿಯಿಂದಲೆ ಯೋಚಿಸುವ ಕವಿ ತನ್ನ ಕೃತಿಗಳಲ್ಲಿ ಓದಿಸಿಕೊಂಡು ಹೋಗುವ ಸಾಮರ್ಥ್ಯ ಹೊಂದಿದ್ದಾನೆ. ಯಾವ ಕೃತಿರಚನೆ ಬಗ್ಗೆಯಾಗಲಿ, ಕಾಲದ ಬಗ್ಗೆಯಾಗಲಿ ಗೊಂದಲಗಳಿಲ್ಲ. ಪಂಪ, ಪೊನ್ನರ ದಟ್ಟವಾದ ಪ್ರಭಾವದ ನಡುವೆಯೂ ಓದುಗರಿಗೆ ಸಮೀಪವಾದ ಭಾಷೆಯನ್ನೆ ಬಳಸಿರುವುದು ಈತನ ವೈಶಿಷ್ಟ್ಯ.

**ತ್ರಿಭುವನ ತಿಲಕ ಚೂಡಾಮಣಿ ಬಸದಿ ಜೀರ್ಣೋದ್ಧಾರ ಚರಿತೆ : ಕ್ರಿ.ಶ. ೧೭೪೬**

-ಅಜ್ಞಾತ ಕವಿಯೊಬ್ಬನಿಂದ ರಚಿತವಾದ ಈ ಕೃತಿ ತನ್ನ ವಸ್ತುವಿನ ಅನನ್ಯತೆಯಿಂದ ಥಟ್ಟನೆ ಗಮನ ಸೆಳೆಯುತ್ತದೆ. ತನ್ನ ಅಪೂರ್ವವಾದ ರಚನಾ ಚಾತುರ್ಯದಿಂದ ಮೂಡುಬಿದಿರೆಯ ಹೆಸರನ್ನು ಐತಿಹಾಸಿಕವಾಗಿ ಕೀರ್ತಿವಂತವಾಗಿ ಮಾಡಿದ ತ್ರಿಭುವನ ತಿಲಕ ಚೂಡಾಮಣಿ ಬಸದಿ ನಿರ್ಮಾಣದ ಪ್ರಾರಂಭದ ಹಂತ ಕ್ರಿ.ಶ. ೧೪೩೦. ಮೂರನೆ ಹಾಗೂ ಅಂತಿಮ ಹಂತವು ಕ್ರಿ.ಶ. ೧೪೭೬ರಲ್ಲಿ. ಪ್ರಾರಂಭದಲ್ಲಿ ಮುಳ್ಳಿನ ಹುಲ್ಲಿನ ಮಾಡನ್ನು ಹೊಂದಿದ್ದ ಈ ಬಸದಿಯು ಕಾಲನ ಹೊಡೆತಕ್ಕೆ ಸಿಕ್ಕು ಮುನ್ನೂರು ವರ್ಷಗಳು ಉಳಿದಿದ್ದೆ ಹೆಚ್ಚು. ಕ್ರಿ.ಶ. ೧೭೪೬ರಲ್ಲಿ ಸಂಪೂರ್ಣ ಶಿಥಿಲವಾಗಿದ್ದ ಈ ಬಸದಿಯನ್ನು ಹಾಸನದಿಂದ ಬಂದಿದ್ದ ಶ್ರೀಮಂತ ವರ್ತಕನಾಗಿದ್ದ ಪುಟ್ಟಯ್ಯ ಎಂಬುವವನಿಂದ ಪುನರ್‌ನಿರ್ಮಾಣಗೊಂಡು ಇಂದಿನ ಸ್ಥಿತಿಯಲ್ಲಿ ನಮಗೆ ದೊರಕಿದೆ. ಕಾವ್ಯನಾಯಕನಾದ ಪುಟ್ಟಯ್ಯ ಕಾರಣಾರ್ಥವಾಗಿ ಮೂಡುಬಿದಿರೆಗೆ ಬಂದದನ್ನೂ, ಜೀರ್ಣಗೊಂಡ ಸ್ಥಿತಿಯಲ್ಲಿದ್ದ ಹೊಸಬಸದಿಯನ್ನು, ಪುನರ್-ನಿರ್ಮಿಸಿಕೊಡಬೇಕೆಂದು ಊರ ಶ್ರಾವಕರು ಕೋರಿದಂತೆ, ವಚನ ಬದ್ಧನಾದ ಪುಟ್ಟಯ್ಯ ಸಮ್ಮೇದಗಿರಿಯ ಯಾತ್ರೆಯನ್ನು ಮುಗಿಸಿಕೊಂಡು ಹಿಂತಿರುಗಿ ಮೂಡುಬಿದಿರೆಗೆ ಬಂದು, ತನ್ನ ಸಂಪತ್ತನ್ನು ವಿನಿಯೋಗಿಸಿ, ಈ ಬಸದಿಗೆ ಕಾಯಕಲ್ಪ ನೀಡಿದ. ಬಸದಿಯ ಪುನರ್‌ಪ್ರತಿಷ್ಠಾಪನೆಯ ಸಂದರ್ಭದಲ್ಲಿಯೆ ವಿಧಿವಶನಾಗಿ ಹೋದ – ಈ ಎಲ್ಲ ವಿವರಗಳೂ ಈ ಪುಟ್ಟ ಕೃತಿಯಲ್ಲಿದೆ. ೧೩೮ ಸಾಂಗತ್ಯದಿಂದಲೂ, ಒಂದು ವಾರ್ಧಕ ಷಟ್ಪದಿಯಿಂದಲೂ ರಚಿತವಾದ ಈ ಕೃತಿ ತನ್ನ ವಸ್ತುವಿನ ಅನನ್ಯತೆಯಿಂದ ಗಮನಸೆಳೆಯುತ್ತದೆ.

**ಧವಲಾ-ಜಯ ಧವಲಾ : ಮಹಾ ಧವಲಾ**

ಮೂಡುಬಿದಿರೆ ಇಂದು ಜೈನಕಾಶಿ ಎಂದೆನ್ನಿಸಿಕೊಳ್ಳಲು, ಉತ್ತರ ಭಾರತೀಯ ಶ್ರದ್ಧಾವಂತ ಜೈನ ಧರ್ಮೀಯರಿಗೆ ಅತ್ಯಂತ ಪವಿತ್ರ ತೀರ್ಥಕ್ಷೇತ್ರವಾಗಲು ಮೂಡುಬಿದಿರೆಯಲ್ಲಿ ಸಂರಕ್ಷಿಸಲ್ಪಟ್ಟಿರುವ ಧವಲಾ- ಜಯ ಧವಲಾ- ಮಹಾ ಧವಲಾ ಎಂಬ ಅಪೂರ್ವ ಶಾಸ್ತ್ರಗ್ರಂಥಗಳೇ ಮುಖ್ಯ ಕಾರಣ. ಭಗವಾನ್ ಮಹಾವೀರರ ಬೋಧನೆಗಳು ಹಂತಹಂತವಾಗಿ ಕಿವಿಯಿಂದ ಕಿವಿಗೆ ಹರಡಿ, ಕಡೆಗೊಮ್ಮೆ ಕಾಲಗತಿಯಲ್ಲಿ ಗ್ರಂಥಸ್ಥವಾಗುವ ಅನಿವಾರ್ಯತೆ ಮೂಡಿ ಬಂದಿತು. ಕಾಲಕ್ರಮದಲ್ಲಿ ಈ ಗ್ರಂಥಸ್ಥ ತತ್ವಗಳೂ ಸಾಮಾನ್ಯರ ತೆಕ್ಕೆಗೊಗ್ಗದೆ ಹೋದಾಗ, ಇವುಗಳಿಗೆ ಟೀಕೆಗಳು ಅನಿವಾರ್ಯವಾದವು. ಈ ಅನಿವಾರ್ಯತೆಯು ಮೂರು ಹಂತಗಳಲ್ಲಿ ಧವಲಾ-ಜಯ ಧವಲಾ- ಮತ್ತು ಮಹಾ ಧವಲಾ ದ ಮೂಲಗಳಾದವು. ಇಂದು ಈ ಮೂರು ಕೃತಿಗಳು ಕೇವಲ ಒಂದೊಂದೆ ಪ್ರತಿ ಉಳಿದುಕೊಂಡಿದ್ದು ಅವು ಮೂಡುಬಿದಿರೆಯಲ್ಲಿ ಸುರಕ್ಷಿತವಾಗಿದೆ. ಅಲ್ಲದೆ ಈ ಹಸ್ತಪ್ರತಿಗಳ ವಿಶೇಷ ಎಂದರೆ, ಇವುಗಳು ಇರುವುದು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ. ಆದರೆ, ಲಿಪಿ ಪ್ರಾಚೀನ ಹಳೆಗನ್ನಡ, ಆದುದರಿಂದ ಮೂಡುಬಿದಿರೆಯಂತಹಾ ಒಂದು ಪುಟ್ಟ ಊರು, ಹಾಗೂ ಕನ್ನಡವು ಅಖಂಡ ಭಾರತೀಯ ತತ್ವಶಾಸ್ತ್ರಜ್ಞರಿಗೂ, ಜೈನ ಸಿದ್ಧಾಂತಿಗಳಿಗೂ ಪ್ರಾತಃಸ್ಮರಣೀಯ ಹೆಸರಾಯ್ತು. ಬಹುಷಃ ಈ ಸಿದ್ಧಾಂತ ಗ್ರಂಥಗಳು ಮೂಡುಬಿದಿರೆಯಲ್ಲಿ ರಕ್ಷಿತವಾಗಿರದಿದ್ದರೆ, ಅಮೂಲ್ಯವಾದ ಭಾರತೀಯ ಸೈದ್ಧಾಂತಿಕ ಜ್ಞಾನದ ಒಂದು ಪ್ರಮುಖ ಕೊಂಡಿಯೆ ಕಳಚಿಹೋಗಿರುತ್ತಿತ್ತು. ಅದನ್ನು ಉಳಿಸಿದ, ಇಂದಿನ ಪೀಳಿಗೆಗೆ ಅದನ್ನು ತಲುಪಿಸಿದ ಸಾರ್ಥಕ ಭಾವವನ್ನು ಇಂದು ಮೂಡುಬಿದಿರೆ ಪಡೆಯಿತು.

**ಪದ್ಮನಾಭ ಮತ್ತು ಚಂದ್ರಶೇಖರ : ಕಾಲ : ಸು : ೧೭೫೧**

ರತ್ನಾಕರನ ಭರತೇಶ ವೈಭವವನ್ನು ಬಿಟ್ಟರೆ ಸಾಂಗತ್ಯದಲ್ಲಿ ಅತ್ಯಂತ ದೀರ್ಘವಾದದ್ದೂ, ಮಹತ್ವದ್ದೂ ಆದ ಕೃತಿ 'ರಾಮಚಂದ್ರ ಚರಿತ್ರೆ'. ೩೭ ಸಂಧಿಗಳು, ೫೨೯೯ ಸಾಂಗತ್ಯ ಪದ್ಯಗಳನ್ನು ಒಳಗೊಂಡ ಈ ಕೃತಿಯನ್ನು ಪ್ರಾರಂಭಿಸಿದವ ಚಂದ್ರಶೇಖರ. ಈತ ಬಂಗವಾಡಿಯ ಲಕ್ಷ್ಮಣ ಬಂಗರಸನ ಆಸ್ಥಾನ ಕವಿ. ಕಾರಣಾಂತರವಾಗಿ ಅಪೂರ್ಣವಾಗಿದ್ದ ಕೃತಿಯನ್ನು ಮುಲ್ಕಿಯ ಸಾಮಂತ ಅರಸ ಶ್ರೀ ಚೆನ್ನರಾಜೇಂದ್ರನ ಆಸ್ಥಾನ ಪಂಡಿತ ಪದ್ಮನಾಭ ಪೂರ್ಣಗೊಳಿಸಿದನು. ಈ ಪದ್ಮನಾಭ ಮೂಡುಬಿದಿರೆಯವನು. ಜೈನ ಸಂಪ್ರದಾಯನುಸಾರವಾದ ರಾಮನ ಕಥೆಯೆ ಈ ಕೃತಿಯ ವಸ್ತು. ಇಬ್ಬರೂ ಕವಿಗಳ ಭಾಷಾಶೈಲಿಯು ಭಿನ್ನವಾದದ್ದು. ಚಂದ್ರಶೇಖರನು ಸರಳವಾದ ಕನ್ನಡದಲ್ಲಿ ಪದಲಾಲಿತ್ಯದಿಂದ ಮನೋಹರವಾದ ರೀತಿಯ ಭಾಷಾ ಶೈಲಿಯವನು. ಸಾಂಗತ್ಯವೆ ಆದರೂ ಸಂಸ್ಕೃತ ಸಂಮೃದ್ಧತೆಯ ಆಡಂಬರ ಪೂರ್ಣವಾದ ಪ್ರೌಢಶೈಲಿ ಪದ್ಮನಾಭನದು. ಕಾವ್ಯವನ್ನು ಓದುವಾಗಲೆ ಈ ವಿಭಿನ್ನ ಭಾಷಾ ಶೈಲಿ ನಮಗೆ ವೇದ್ಯವಾಗುತ್ತದೆ. ಮುಲ್ಕಿ, ಬಂಗವಾಡಿ, ಅರಸು ಮನೆತನಗಳ ಹಲವು ಐತಿಹಾಸಿಕ ವಿವರಗಳಿಂದಲೂ ಸಮೃದ್ಧವಾದ ಈ ಕೃತಿ ಸಾಂಗತ್ಯದ ಮಹತ್ವದ ಕೃತಿಗಳಲ್ಲಿ ಒಂದಾಗಿ ಅಭ್ಯಾಸ ಯೋಗ್ಯ ಕೃತಿ ಆಗಿದೆ.

**ಪಟ್ಟಾಭಿರಾಮ : ಕಾಲ : ೧೭೫೦**

ಹುಟ್ಟಿನಿಂದ ಹಾಗೂ ಶ್ರದ್ಧೆಯಿಂದ ಬ್ರಾಹ್ಮಣನಾದರೂ ತನ್ನ ಆತ್ಮೀಯ ವಲಯದ ಜೈನ ಶ್ರಾವಕರ ಕೋರಿಕೆಯಂತೆ ಜೈನಕೃತಿ ರಚಿಸಿದ ಪಟ್ಟಾಭಿರಾಮ ರಚಿಸಿರುವ ಕೃತಿ 'ರತ್ನಶೇಖರ ಚರಿತ್ರೆ'. ಬೆಟಕೇರಿ ಬಸದಿಯಲ್ಲಿ ವಾಸ್ತವ್ಯ. ಹೂಡಿದ್ದ ಪ್ರಭಾಚಂದ್ರ ಮುನಿವರ್ಯರು ಶ್ರಾವಕರ ಸ್ವಾಧ್ಯಾಯಕ್ಕಾಗಿ ಪುಷ್ಪಾಂಜಲಿ ನೋಂಪಿಯ ಕತೆಯನ್ನು ಹೇಳುತ್ತಿರುವಾಗ ಈ ಕಥೆ ಕೃತಿರೂಪದಲ್ಲಿ ಬಂದರೆ ಚೆಂದ ಎಂಬ ಅಭಿಪ್ರಾಯ ಮೂಡಿಬಂತು. ಆಗ ಮುಮ್ಮಡಿ ಅಬ್ಬಕ್ಕದೇವಿಯ ಮಂತ್ರಿಯಾಗಿದ್ದ ಕೋದಂಡರಾಮನ ಪುತ್ರ ಪಟ್ಟಾಭಿರಾಮನು ಜೈನ ಶ್ರಾವಕರ ಕೋರಿಕೆಯಂತೆ ಈ ಕೃತಿ ರಚಿಸಿದನು. ಸ್ವತಃ ಬ್ರಾಹ್ಮಣನಾದರೂ ಎಲ್ಲಿಯೂ ಜೈನ ಪರಂಪರೆಗೆ ಚ್ಯುತಿ ಬರದಂತೆ ಕಾವ್ಯ ರಚಿಸಿರುವುದು ಪಟ್ಟಾಭಿರಾಮನ ವೈಶಿಷ್ಟ್ಯ.

**ಚಂದಯ್ಯ : ಕ್ರಿ.ಶ. ೧೮೨೮**

ಐತಿಹಾಸಿಕವಾಗಿ ಪ್ರಾಚೀನ ಪರಂಪರೆಯ ಕೊನೆಯಕೊಂಡಿ ಚಂದಯ್ಯ. ಈತನ ಕೃತಿ 'ಜೈನಾಚಾರ'. ಜೈನರ ಆಚಾರಗಳಾದ ಅಹಿಂಸೆ, ಸತ್ಯ, ಅಚಾರ್ಯ, ಬ್ರಹ್ಮಚರ್ಯ, ತ್ಯಾಗ ಹಾಗೂ ಸಮ್ಯಕ್ತ್ವದ ಎಂಟು ಅಂಗಗಳ ಪಾಲನೆಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ತನ್ನ ಕೃತಿಯಲ್ಲಿ ಕವಿ ಹೇಳಿದ್ದಾನೆ. ೩೨ ಸಂಧಿಗಳ ೩೭೮೯ ಸಾಂಗತ್ಯ ಪದ್ಯಗಳನ್ನು ಒಳಗೊಂಡ ಈ ಕೃತಿಯು ಹಲವಾರು ಐತಿಹಾಸಿಕ ದಾಖಲೆಯನ್ನು ಒಳಗೊಂಡಿದೆ.

**ಆಧುನಿಕ ಕವಿಗಳು**

ಮೂಡುಬಿದಿರೆಯ ಆಧುನಿಕ ಸಾಹಿತ್ಯದ ಬಗ್ಗೆ ಬರೆಯುವಾಗ ನೆನಪಿಸಿಕೊಳ್ಳಬೇಕಾದ ಮೊದಲ ಹೆಸರು ದಿ|| ಲೋಕನಾಥ ಶಾಸ್ತ್ರಿಗಳವರದ್ದು. ಪ್ರಾಚೀನ ಸಾಹಿತ್ಯವನ್ನು ಸಂರಕ್ಷಿಸುವ, ತಾಡಪತ್ರ ಗ್ರಂಥಗಳನ್ನು ಸಂಗ್ರಹಿಸುವಲ್ಲಿ ಇವರ ಸೇವೆ ಅನುಪಮವಾದದ್ದು. ಇವರ ಶ್ರಮದಿಂದಾಗಿಯೇ ನಾಮವಶೇಷ ಆಗಬಹುದಾಗಿದ್ದ ಹಲವಾರು ಕವಿಗಳ ಕೃತಿಗಳು ಉಳಿದುಕೊಂಡಿವೆ. 'ಬಾಲಬೋಧೆ, ಜೈನಧರ್ಮ', ವೇಕಟೂರಿನ ಗತವೈಭವ' ಸೃಷ್ಟಿವಾದ ವಿಚಾರ, ಸೂತಕ ಗೋತ್ರ ವಿಚಾರ, ಷೋಡಶ ಕ್ರಿಯಾ ಮಂಜರಿ, ವೈರಾಗ್ಯಮಾಲಾ, ಅಷ್ಟಾವಧಾನಾದಿ ಪದ ಸಂಗ್ರಹ, ತುಳುನಾಡಿನ ಬಸದಿಗಳು, ಮೂಡುಬಿದಿರೆ ಚರಿತೆ, ಅನೇಕಾಂತ ದರ್ಶನ, ಶಾಂತಿನಾಥ ಚರಿತ್ರೆ ಮುಂತಾದ ಹಲವಾರು ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿರುವ ಲೋಕನಾಥ ಶಾಸ್ತ್ರಿಗಳು ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. ಹೀಗೆ ಕವಿಯಾಗಿ, ಸಂಶೋಧಕರಾಗಿ, ಪತ್ರಿಕಾ ಸಂಪಾದಕರಾಗಿ, ಮೂಡುಬಿದಿರೆಯ ಸಾಹಿತ್ಯ ಲೋಕಕ್ಕೆ, ಇವರು ಮಾಡಿರುವ ಸೇವೆ ಉನ್ನತ ಮಟ್ಟದ್ದು. ಇವರ ಸಮಕಾಲೀನವರಾಗಿದ್ದ ದಿ|| ಭುಜಬಲಿ ಶಾಸ್ತ್ರಿಗಳು ಮತ್ತೊಬ್ಬ ಮಹತ್ವದ ಸಾಧಕರು. ಸಂಸ್ಕೃತ ಭಾಷಾ ವಿದ್ವಾಂಸರಾಗಿ ಆತ್ಮ ನಿವೇದನಂ, ಶಾಂತಶೃಂಗಾರ ದೀಪ, ಮಹಾವೀರ ಬಾಹುಬಲಿ, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ವಿವಿಧ ಪತ್ರಿಕೆಗಳಿಗೆ ನೂರಾರು ಸಂಶೋಧನಾ ಬಿಡಿ ಲೇಖನಗಳನ್ನು ಬರೆದಿರುವ ಶಾಸ್ತ್ರಿಗಳು' ಆದರ್ಶ ಸಾಹಿತಿಗಳು, ಮೂರ್ತಿ ಪೂಜೆಯ ಅವಶ್ಯಕತೆ, ಬಾಹುಬಲಿ ಚರಿತೆ, ಸಮವಸರತಾ, ಜೈನಷಟ್ಕರ್ಮ, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. "ಸಂಸ್ಕೃತ ವಾಙ್ಮಯಕ್ಕೆ, ಜೈನ ಕವಿಗಳ ಕಾಣಿಕೆ" ಎಂಬುದು ಇವರ ಮಹತ್ವದ ಸಂಶೋಧನಾ ಗ್ರಂಥ. 'ಜೈನ ಮಹಿಳೆ' ಎಂಬ ಹೆಸರಿನಿಂದ ಕೃತಿ ರಚಿಸುತ್ತಿದ್ದ ೨೦ ಶತಮಾನದ ಹಿರಿಯ ಮಹಿಳಾ ಲೇಖಕಿ ರಾಧಮ್ಮ. ಅಸಂಖ್ಯಾತ ಭಕ್ತಿಗೀತೆಗಳನ್ನು ರಚಿಸಿದ ಇವರು ಸಂಸ್ಕೃತ ಭಾಷೆಯಲ್ಲಿಯೂ ಪ್ರಭುತ್ವ ಹೊಂದಿದ್ದರು. ಅಷ್ಟನಾರ್ಚಕ, ಅನಂತಮಣಿ ಚರಿತೆ, ಲಕ್ಷ್ಮೀಬಾಯಿ ಚರಿತೆ, ನನ್ನ ಭಾವನೆ ಮುಂತಾದ ಕೃತಿಗಳು ಪ್ರಕಟಗೊಂಡಿವೆ. ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿಗಳು ಮೈಸೂರಿನ ಅರಸರಿಂದ 'ಆಸ್ಥಾನ ವಿದ್ವಾನ್' ಎಂದು ಗೌರವಿಸಲ್ಪಟ್ಟವರು. ವಿವಿಧ ಪತ್ರಿಕೆಗಳಿಗೆ ಅಸಂಖ್ಯ ಲೇಖನವನ್ನು ಬರೆದಿರುವ ರಚಿಸಿದ 'ಪ್ರಾಣಿಬಲಿ ನಿಷೇಧ' ಎಂಬ ಕೃತಿ ಮಹತ್ವವಾದದ್ದು. ತೀರ್ಥೇಶ ವೈಭವಂ, ಕಲ್ಯಾಣ ಗೀತಾವಳಿ, ಬಲಾದರ್ಶ, ಲಘು ಜ್ಞಾನಾಮೃತಸಾರ, ಮುಂತಾದ ಕೃತಿ ರಚಿಸಿದ್ದಾರೆ. ಪಂ|| ಕೆ. ಜಿನರಾಜ ಶಾಸ್ತ್ರಿಗಳು ಮೈಸೂರು ಅರಸರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದರು. ಸಂಸ್ಕೃತ, ಪ್ರಾಕೃತ, ಹಿಂದಿ, ಕನ್ನಡ ಭಾಷೆಗಳಲ್ಲಿ ಪ್ರಕಟಿತ ಪಾಂಡಿತ್ಯ ಹೊಂದಿದವರು. ಇಷ್ಟೋಪದೇಶ, ಆತ್ಮಸಿದ್ಧಿ, ಲಘುಪಾಠ ಸಂಗ್ರಹ, ಎಂಬುದು ಇವರ ಕೃತಿಗಳು.

**ಇತರೆ ಆಧುನಿಕ ಕವಿಗಳು**

ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಪಳಕಳ ಸೀತಾರಾಮಭಟ್ಟ, ತಮ್ಮ ವಿಶಿಷ್ಟ ಬರವಣಿಗೆಯಿಂದ ಓದುಗರ ಗಮನ ಸೆಳೆದಿರುವ ರಸಿಕ ಪುತ್ತಿಗೆ, ತಮ್ಮ ಘನ ಪಾಂಡಿತ್ಯದ ಮೂಲಕ ಸಂಶೋಧನಾ ವಲಯದಲ್ಲಿ ಹೆಸರು ಮಾಡಿರುವ ವಿದ್ವಾನ್ ಟಿ. ರಘುಚಂದ್ರ ಶೆಟ್ಟಿ, ಕಾಂತರ್ರೈ, ಆಶಾಕವಿಯಾಗಿ ಹೆಸರಾಗಿದ್ದ ಆಶಾಕವಿ ದಿ || ಜ್ಯೋತಿಷಿ ಜಗತ್ತಾಲಯ್ಯ, ಇಂದಿಗೂ ದಣಿವರಿಯದ ಉತ್ಸಾಹದಿಂದ ಕನ್ನಡ, ಹಿಂದಿ, ಭಾಷೆಯಲ್ಲಿ ಕೃತಿಗಳನ್ನು ರಚಿಸಿ, ಅನೇಕ ಅಪೂರ್ವ ಪ್ರಾಚೀನ ಕೃತಿಗಳನ್ನು ಸಂಗ್ರಹಿಸಿ, ಸಂಶೋಧಿಸಿರುವ ಪಂ || ದೇವಕುಮಾರ ಶಾಸ್ತ್ರಿ ಮುಂತಾದವರು ಮೂಡುಬಿದಿರೆಯ ಹಿರಿಯ ವಿದ್ವತ್ ಪರಂಪರೆಗೆ ಸೇರಿದವರು. ಡಾ || ಪುಂಡಿಕ್ಯಾ ಗಣಪಯ್ಯ ಭಟ್ಟ, ಡಾ || ರಮೇಶ್ಚಂದ್ರರಾವ್, ಪ್ರೊ || ಬಿ.ಎಂ. ಇಚ್ಲಂಗೋಡು, ಡಾ || ಜಯಪ್ರಕಾಶ ಮಾವಿನ ಕುಳಿ, ಪ್ರೊ || ಎಸ್.ಪಿ. ಅಜಿತ ಪ್ರಸಾದ್, ಆರ್.

ರಾಮಚಂದ್ರ ಪೈ, ಮುಂತಾದವರು ಯುವ ಲೇಖಕರಾಗಿ ಹಲವು ಉತ್ತಮ ಕೃತಿಗಳನ್ನು ಪ್ರಕಟಿಸಿ, ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿದ್ದಾರೆ.

**ಉಪಸಂಹಾರ**

ಇತಿಹಾಸ ಪೂರ್ವ ಕಾಲದಿಂದಲೂ ಮೂಡುಬಿದಿರೆ ತನ್ನದೆ ಆದ ವೈಶಿಷ್ಟ್ಯಗಳನ್ನು ಮೆರೆದ ಊರು. ಇಂದಿನ ಆಧುನಿಕ ಮೂಡುಬಿದಿರೆಯ ಒಟ್ಟು ವಿಸ್ತೀರ್ಣ ೩೯.೬೨ ಚದರ ಕಿಲೋಮೀಟರ. ಈ ಊರಿನ ಪುರಸಭೆಯ ವ್ಯಾಪ್ತಿಗೆ ಪ್ರಾಂತ್ಯ, ಮಾರ್ಪಾಡಿ, ಕರಂಜೆ, ಕಲ್ಲಬೆಟ್ಟು, ಮಾರೂರೂ ಎಂಬ ಗ್ರಾಮಗಳು ಸೇರಿವೆ. ಹೊಸಬೆಟ್ಟ, ಪಡುಮಾರ್ನಾಡು, ಪುತ್ತಿಗೆ, ಮತ್ತು ಹೊಸಂಗಡಿ ಗ್ರಾಮಗಳು ಗಡಿಯಾಗಿ ಹೊಂದಿರುವ ಮೂಡುಬಿದಿರೆಯಲ್ಲಿ ಹಿಂದೂ, ಜೈನ, ಮುಸ್ಲಿಂ, ಮತ್ತು ಕ್ರಿಶ್ಚಿಯನ್ ಸಮುದಾಯದವರು ಪರಸ್ಪರ ಸೌಹಾರ್ಧತೆಯಿಂದ ಬಾಳುತ್ತಿದ್ದಾರೆ. ಒಟ್ಟು ಜನಸಂಖ್ಯೆ ೨೫೭೧೦. ಆದರೆ ಇಂದು ಮೂಡುಬಿದಿರೆ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಮಾತ್ರವಲ್ಲದೆ, ಕರ್ನಾಟಕ ರಾಜ್ಯದಲ್ಲಿಯೆ ಅತ್ಯಂತ ವೇಗವಾಗಿ ಬಹುಮುಖಿ ಬೆಳವಣಿಗೆಗೆ ತನ್ನನ್ನು ತಾನು ಅತ್ಯಂತ ತೀವ್ರವಾಗಿ ತೊಡಗಿಸಿಕೊಂಡಿರುವ ಊರಾಗಿದೆ. ಸರಕಾರಿ ಹಾಗೂ ಖಾಸಗಿ ಮಟ್ಟದಲ್ಲಿ ಅತ್ಯಾಧುನಿಕ ವೈದ್ಯಕೀಯ, ಪಾಲಿಟೆಕ್ನಿಕ್, ಸಾಂಪ್ರದಾಯಿಕ ಕಲಾ, ವಿಜ್ಞಾನ ವಾಣಿಜ್ಯ ಕಾಲೇಜುಗಳು, ಸಂಗೀತ, ನೃತ್ಯ, ವ್ಯಾಯಾಮ, ಕಂಪ್ಯೂಟರ್, ಟೈಪರೈಟಿಂಗ್, ಪದವಿಪೂರ್ವ, ಪ್ರೌಢ, ಹಿರಿಯ ಪ್ರಾಥಮಿಕ ಮುಂತಾದ ಶಿಕ್ಷಣ ಸಂಸ್ಥೆಗಳು ಒಟ್ಟು ೭೯ ಇವೆ ಎಂದರೆ ಅಚ್ಚರಿ ಹುಟ್ಟಿಸುವಂತಹುದು. ಈ ಅಂಕಿ ಸಂಖ್ಯೆಗಳು ಈ ಪುಟ್ಟ ಊರು ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಬೆಂಬಲದ ಸ್ವರೂಪವನ್ನು ಮನವರಿಕೆ ಮಾಡಿಕೊಡುತ್ತದೆ. ಅತ್ಯಾಧುನಿಕ ಸೈಬರ್ ಕೆಫೆಗಳು ತಲೆ ಎತ್ತಿವೆ. ಈ ಊರಿನ ವ್ಯಾಪಾರ ವಾಣಿಜ್ಯ ವಿಷಯಗಳು "ಹಲೊ ಮೂಡುಬಿದಿರೆ"ಯಲ್ಲಿ ದೊರೆತರೆ, ಮೂಡುಬಿದಿರೆಯ ಇಂದಿನ ಸಮಗ್ರ ಮಾಹಿತಿಯನ್ನು ಒಳಗೊಂಡ ಕಿರುಹೊತ್ತಗೆಗಳೂ ಲಭ್ಯವಿವೆ. ಇಷ್ಟಾದರೂ ಕರ್ನಾಟಕ ರಾಜ್ಯದ ಪ್ರವಾಸೋದ್ದಿಮೆ ಇಲಾಖೆ ಇನ್ನೂ ಎಚ್ಚೆತ್ತುಕೊಳ್ಳಬೇಕಿದೆ. ಮೂಡುಬಿದಿರೆ ಹಾಗೂ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪ್ರವಾಸಿಗರಿಗೆ ಸುಲಭವಾಗಿ ದೊರೆಯುವ ವ್ಯವಸ್ಥೆ ಮಾಡಬೇಕಾಗಿದೆ. ಯೋಜನಾ ಬದ್ಧ ರೀತಿಯಲ್ಲಿ ನಗರ ಬೆಳೆಯಬೇಕಿದೆ. ರಸ್ತೆಗಳು ಅಗಲಗೊಂಡು ಒಳಚರಂಡಿ ವ್ಯವಸ್ಥೆ ರೂಪುಗೊಳ್ಳಬೇಕಿದೆ. ಪ್ರಾಚೀನತೆಯನ್ನು ಉಳಿಸಿಕೊಂಡೆ ಆಧುನಿಕ ವೇಷ ತೊಟ್ಟಿರುವ ಮೂಡುಬಿದಿರೆ ಬದುಕಿನಲ್ಲಿ ಒಮ್ಮೆಯಾದರೂ ಮರೆಯದೆ ಸಂದರ್ಶಿಸಬೇಕಾದ ಪ್ರೇಕ್ಷಣೀಯ ಸ್ಥಳ ಎಂಬುದರ ಬಗ್ಗೆ ಮಾತ್ರ ಎರಡು ಮಾತಿಲ್ಲ.

## ಗ್ರಂಥ ಋಣ : ಸಹಾಯಕ ಲೇಖನಗಳು

(೧) ಮೂಡುಬಿದಿರೆ ಚರಿತೆ : ದಿ || ಲೋಕನಾಥ ಶಾಸ್ತ್ರಿ.

(೨) ಕೌಳವ : ಡಾ || ಪುಂಡಿಕ್ಯಾ ಗಣಪಯ್ಯ ಭಟ್.

(೩) ಕನ್ನಡ ಸಾಹಿತ್ಯಕ್ಕೆ ಮೂಡುಬಿದಿರೆಯ ಕೊಡುಗೆ : ಡಾ || ವೈ. ಉಮಾನಾಥ ಶೆಣೈ.

(೪) ಮೂಡುಬಿದಿರೆಯ ಐತಿಹಾಸಿಕ-ಸಾಂಸ್ಕೃತಿಕ ಸಮೀಕ್ಷೆ : ಡಾ || ಪುಂಡಿಕ್ಯಾ ಗಣಪಯ್ಯ ಭಟ್

(೫) ಮೂಡುಬಿದಿರೆ, ಅಂದು-ಇಂದು : ಪಂ || ದೇವಕುಮಾರ ಜೈನ.

(೬) ಮೂಡುಬಿದಿರೆ-ಇತಿಹಾಸ ಮತ್ತು ಸಂಸ್ಕೃತಿ : ಡಾ || ಪಿ.ಎನ್. ನರಸಿಂಹಮೂರ್ತಿ.

(೭) ಗುರುಗಳ ಬಸದಿ-ಸಿದ್ಧಾಂತ ಮಂದಿರ : ಪಂ || ದೇವಕುಮಾರ ಶಾಸ್ತ್ರಿ.

(೮) ಮೂಡುಬಿದಿರೆಯ ಜೈನ ಶಾಸನಗಳು : ಡಾ || ಪುಂಡಿಕ್ಯಾ ಗಣಪಯ್ಯ ಭಟ್.

(೯) ಮೂಡುಬಿದಿರೆಯ ಇತಿಹಾಸ : ಡಾ || ಉಮಾನಾಥ ಶೆಣೈ

(೧೦) ಶೆಟ್ಟರ ಬಸದಿಯ ಕೆಲವು ಚಾರಿತ್ರಿಕ ಅಂಶಗಳು : ಡಾ || ಎಸ್.ಡಿ. ಶೆಟ್ಟಿ.